# ECHO OF HIS CALL

# ಕರೆಯ ಪ್ರತಿಧ್ವನಿ

KANNADA

*India's National Spiritual Newspaper*

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAANS

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXIII | YEAR OF OUR LORD JESUS CHRIST, 2021 MAY | No. 5


## ಪರಿಶುದ್ಧ ಸತ್ಯವೇದ

**ದಯಮಾಡಿ ಈ ವಾಕ್ಯ ಭಾಗಗಳನ್ನು ಕಂಠ ಪಾಠ ಮಾಡಿರಿ. ದೇವರ ನಾಮಕ್ಕೆ ಸ್ತೋತ್ರ ವಾಗಲಿ (ಧರ್ಮೋಪದೇಶ ಕಾಂಡ 28:1-8)**

1. ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಈಗ ನಿಮಗೆ ಬೋಧಿಸುವ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತ ಸ್ಥಿತಿಗೆ ತರುವನು.
2. ನಿಮ್ಮ ದೇವರಾದ ಯೆಹೋವನ ಮಾತಿಗೆ ಕಿವಿಗೊಟ್ಟು ನಡೆದರೆ ಈ ಶುಭಗಳೆಲ್ಲಾ ನಿಮಗೆ ಪ್ರಾಪ್ತವಾಗುವವು. ಯಾವುವೆಂದರೆ -
3. ನಿಮಗೆ ಊರಲ್ಲಿಯೂ ಅಡವಿಯಲ್ಲಿಯೂ ಶುಭವುಂಟಾಗುವುದು.
4. ನಿಮ್ಮ ಸಂತಾನ ವ್ಯವಸಾಯಗಳಿಗೂ ದನಕುರಿ ಮುಂತಾದ ಪಶುಗಳಿಗೂ ಶುಭವುಂಟಾಗು ವುದು.
5. ನಿಮ್ಮ ಪುಟ್ಟಿಗಳಿಗೂ ಕೊಣವಿಗೆಗಳಿಗೂ ಶುಭವುಂಟಾಗುವುದು.
6. ನೀವು ಕೆಲಸಕ್ಕೆ ಹೋಗುವಾಗಲೂ ಬರುವಾಗಲೂ ಶುಭವುಂಟಾಗುವುದು.
7. ನಿಮ್ಮ ಮೇಲೆ ಬರುವ ಶತ್ರುಗಳು ನಿಮ್ಮಿಂದ ಸೋತು ಹೋಗುವಂತೆ ಯೆಹೋವನು ಮಾಡುವನು. ಅವರು ಒಂದೇ ದಾರಿಯಿಂದ ನಿಮ್ಮ ಮೇಲೆ ಬಂದರೂ ಏಳು ದಾರಿಗಳಿಂದ ಓಡಿ ಹೋಗುವರು.
8. ನಿಮ್ಮ ಕಣಜಗಳು ಯಾವಾಗಲೂ ತುಂಬಿರುವಂತೆಯೂ ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೋವನು ನಿಮಗೆ ಶುಭವನ್ನು ಅನು ಗ್ರಹಿಸುವನು. ಆತನು ನಿಮಗೆ ಕೊಡುವ ದೇಶದಲ್ಲಿ ನಿಮಗೆ ಶುಭವನ್ನೇ ಉಂಟು ಮಾಡುವನು.

# ಎಲ್ಲವೂ ನೆಲದ ತ್ಯಾಜ್ಯದ ಮೇಲೆ ಬಿದ್ದರೂ, ದೇವರ ಯಾವುದೇ ಮಾತುಗಳು ನೆಲದ ಮೇಲೆ ಬೀಳುವುದಿಲ್ಲ!

# Even if everything falls on ground waste, none of God's Words will fall on the ground!

(ಮುಖ್ಯ ಸಭೆಯಲ್ಲಿ ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರು ಸಂದೇಶವನ್ನು ಪ್ರಸಂಗಿಸಿದ್ದು)

**ಸಮುವೇಲನು ದೊಡ್ಡವನಾಗುತ್ತಾ ಬಂದನಷ್ಟೆ, ಯೆಹೋವನು ಅವನೊಡನೆ ಇದ್ದರಿಂದ ಅವನ ಪ್ರವಾದನೆಗಳು ಒಂದೂ ಬಿದ್ದು ಹೋಗಲಿಲ್ಲ (1 ಸಮುವೇಲ 3:19).**

ನಾನು ಚಿಕ್ಕವನಾಗಿರುವಾಗ ನನ್ನ ಮಾಮ (ತಾಯಿಯ ಸಹೋದರ) ಮತ್ತು ಚಿಕ್ಕಮ್ಮ (ತಾಯಿಯ ಸಹೋದರಿ)ಯ ತಾಯಿಯ ಪ್ರೀತಿಯ ಜೊತೆಗೆ ಹೆಚ್ಚು ಮೇಲ್ವಿಚಾರಣೆಯಲ್ಲಿ ಬೆಳೆದೆನು. ನನ್ನ ತಂದೆಯು ದೂರದ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದನು ಮತ್ತು ಯಾವಾಗ ಯಾವಾಗ ರಜಾ ಕಾಲದಲ್ಲಿ ಅತನು ನನಗೆ ಆನೇಕ ಕೊಡುಗೆಗಳನ್ನು ಮನೆಗೆ ತರುತ್ತಿದ್ದನು. ನಮ್ಮ ಕುಟುಂಬದಲ್ಲಿ ನಾನು ಬಹಳ ಅಚ್ಚುಮೆಚ್ಚಿನ ಹುಡುಗನಾಗಿದ್ದೆನು. ನಾವೆಲ್ಲರೂ ಅವಿಭಕ್ತ ಕುಟುಂಬವಾಗಿ ವಾಸಿಸುತ್ತಿದ್ದೆವು. ಒಮ್ಮೆ ಅವರು ವಿದೇಶದಿಂದ ಅಮದು ಮಾಡಿಕೊಂಡ ಬಾಟಲಿಯಲ್ಲಿ ನನಗೆ ತುಂಬಾ ದುಬಾರಿ ಆಮದು ಮಾಡಿದ ಸುಗಂಧ ದ್ರವ್ಯವನ್ನು ನೀಡಿದನು. ಆತನು ನನ್ನನ್ನು ಹುರಿದುಂಬಿಸಿ ಮತ್ತು ನಾನು ಅದನ್ನು ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕೆಂದು ಹೇಳಿದನು.

ನಾನು ಅದನ್ನು ಬಹಳ ಸಂತೋಷದಿಂದ ಸ್ವೀಕರಿಸಿದೆನು ಮತ್ತು ನನ್ನ ಎಲ್ಲಾ ಸಂಬಂಧಿಕರಿಗೆ, ಗೆಳೆಯರಿಗೆ ಮತ್ತು ನನ್ನ ಸಭೆಯ ಸಭಾ ಪಾಲಕರಿಗೆ ತೋರಿಸಿದೆನು ಮತ್ತು ನನ್ನ ಸಭೆಯಲ್ಲಿ ಬಂದಂತಹ ಸ್ನೇಹಿತರಿಗೆ ಮತ್ತು ಬಹಳ ಗರ್ವದಿಂದ ಇದು ನನ್ನ ತಂದೆಯು ನನಗೆ ಕೊಟ್ಟಂತಹ ಕೊಡುಗೆಯೆಂದು ಹೇಳಿದೆನು.

ಆದರೆ ಕೆಲವು ದಿನಗಳಲ್ಲಿ, ಆ ಬಾಟಲಿಯನ್ನು ನನ್ನ ಕೈಯಲ್ಲಿ ಹಿಡಿದುಕೊಂಡಿರುವಾಗ, ನನ್ನ ಕೈಯಿಂದ ಜಾರಿ, ಕೆಳಗೆ ಬಿದ್ದು ತುಂಡು ತುಂಡು ಆಗಿ ಹೋಯಿತು! ಬಾಟಲಿಯಲ್ಲಿ ಇದ್ದಂತಹ ಸುಗಂಧ ತೈಲವು ನೆಲದ ಬಿದ್ದು ನನ್ನ ಕಣ್ಣು ಮುಂದೆ ಒಂದು ನದಿಯ ಹಾಗೆ ಹರಿದು ಹೋಯಿತು. ಹಲವು ವರ್ಷಗಳ ಹಿಂದೆ ನಾನು ಅನುಭವಿಸಿದ ಆಘಾತ, ಇನ್ನೂ ನನ್ನ ಮನಸ್ಸಿನ ಮುಂದೆ ಬರುತ್ತದೆ.

ನಿಮ್ಮ ಜೀವನವನ್ನು ತುಂಡರಿಸಿರುವ ಕೆಲವು ಘಟನೆಗಳಿಂದಲೂ ನೀವು ಹೆಚ್ಚು ಪರಿಣಾಮ ಬೀರಬಹುದು. ನಿಮ್ಮ ಕೈಗೆ ತುಂಬಾ ಹತ್ತಿರ ವಿರುವ ಒಳ್ಳೆಯ ಸಂಗತಿಗಳು ನಿಮ್ಮಿಂದ ದೂರ

*(3ನೇ ಪುಟಕ್ಕೆ)*

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*

(ECHO GROUP)





# ನಾನು ನಿನ್ನನ್ನು ಪ್ರೀತಿಸಿರುವುದು ಶಾಶ್ವತ ಪ್ರೇಮದಿಂದಲೇ...

(ಯೆರೆಮೀಯ 31:3)

**ಕರ್ತನಲ್ಲಿ ಪ್ರೀತಿಯ ಸಹೋದರ ಮತ್ತು ಸಹೋದರಿಯರೇ,**

ನಮ್ಮ ಪ್ರಭು ಮತ್ತು ರಕ್ಷಕನಾಗಿರುವ ಯೇಸು ಕ್ರಿಸ್ತನ ಮಧುರವಾದ ನಾಮದಲ್ಲಿ ನಿಮಗೆ ಪ್ರೀತಿಯ ವಂದನೆಗಳು.

ನಾನು ನಂಬುತ್ತೇನೆ ನೀವೆಲ್ಲರೂ ಚೆನ್ನಾಗಿದ್ದಿರೆಂದು. ಕ್ರಿಸ್ತನಲ್ಲಿ ನಿಮ್ಮ ಸಹೋದರನಾಗಿ ಮತ್ತು ಈ ಮಹಾನ್ ಆಧ್ಯಾತ್ಮಿಕ ಉದ್ಯಮದಲ್ಲಿ ಪಾಲುದಾರನಾಗಿ, ಪ್ರತಿದಿನ ಬೆಳಿಗ್ಗೆ ಮತ್ತು ರಾತ್ರಿ ಕೃಪೆಯ ಸಿಂಹಾಸನದ ಮುಂದೆ ನಾನು ನಿಮ್ಮನ್ನು ನೆನಪಿಸುತ್ತೇನೆ. ದಯಮಾಡಿ ಗೊತ್ತು ಮಾಡಿಕೊಳ್ಳಿ ನೀವು ನನ್ನ ಪ್ರಾರ್ಥನೆಯಲ್ಲಿ ಆವರಿಸಿ ಕೊಂಡಿದ್ದೀರಿ. ನನ್ನ ಪ್ರೀತಿಯ ಪ್ರಿಯ ದೇವರಾದ ಯೇಸು ಕ್ರಿಸ್ತನು ನಾನು ಸೇವಿಸುವ ದೇವರು ನಿಮ್ಮನ್ನು ಸಮಾಧಾನ ಪಡಿಸುವನು ಅಥವಾ ನಿಮ್ಮನ್ನು ತ್ಯಜಿಸುವುದಿಲ್ಲ.

ಈ ದಿನಗಳಲ್ಲಿ ಎಂದಿನಂತೆ ನಾನು ಪ್ರಭುವಾದ ಯೇಸು ಕ್ರಿಸ್ತನ ಸೇವೆ ಮಾಡುವುದರಲ್ಲಿ ಪ್ರತಿದಿನ ಮುಂಜಾನೆಯಿಂದ ಮಧ್ಯರಾತ್ರಿಯವರೆಗೆ ಪ್ರಾರ್ಥಿಸುವುದು, ಬರೆಯುವುದು, ಭೋದಿಸುವುದು, ಕಲಿಸುವುದು, ಆಡಳಿತ ಕಾರ್ಯಗಳನ್ನು, ಹಣಕಾಸಿನ ಅಗತ್ಯತೆಗಳನ್ನು ನೋಡಿಕೊಳ್ಳುವುದು ಮುಂತಾದವುಗಳಲ್ಲಿ ತುಂಬಾ ಕಾರ್ಯನಿರತವಾಗಿದ್ದೇನೆ. ನನ್ನ ಕುಟುಂಬದ ಜವಾಬ್ದಾರಿಗಳಲ್ಲದೆ. ನಾನು ಚೆನ್ನಾಗಿ ಮಾಡುತ್ತಿದ್ದೇನೆ. *ಯೆಹೋವನು ನನಗೆ ಕುರುಬನು; ಕೊರತೆ ಪಡೆದನು. ಆತನು ಹಸುರು ಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ; ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರ ಮಾಡುತ್ತಾನೆ. ನನ್ನ ಪ್ರಾಣವನ್ನು ಉಜ್ಜೀವಿನ ಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿ ಮಾರ್ಗ ದಲ್ಲಿ ನನ್ನನ್ನು ನಡೆಸುತ್ತಾನೆ. ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವುದರಿಂದ ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ* (ಕೀರ್ತನೆ 23:1-4). ನಿಮ್ಮ ಜೀವನದಲ್ಲಿ ಇದನ್ನು ನೀವು ಸಹ ಅನುಭವಿಸಬೇಕೆಂಬುದು ನನ್ನ ಆಸೆ.

ನಮ್ಮ ಸೇವೆಯು ಮುಖ್ಯ ಸಭೆ, ಶಾಖೆ ಸಭೆಗಳು, 17 ಭಾಷೆಗಳಲ್ಲಿ ಆತನ ಕರೆಯ ಪ್ರತಿಧ್ವನಿಯ ಮಾಸಪತ್ರಿಕೆ, **ಬೈಬಲ್ ಕೋರ್, ಮೂಲ ಅಂಚೆ ತರಗತಿಗಳು, ನೆಹಮೀಯ ಸತ್ಯವೇದ ಕಾಲೇಜ್, ಸುವಾರ್ತೆಯ ಮುದ್ರಣಾಲಯ, ಸಂತ ಪೌಲ ಮೆಟ್ರಿಕ್ಯುಲೇಷನ್ ಶಾಲೆ,** ಮುಂತಾದವುಗಳು. ಇವೆಲ್ಲಗಳು ದೇವರ ಕೃಪೆಯಿಂದ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಾ ಇವೆ. ನಮ್ಮ ಸಂರಕ್ಷಣೆಗಾಗಿ ಹಾಗು ವಿಸ್ತರಣೆಗಾಗಿ ನಿಮ್ಮ ಪ್ರಾರ್ಥನೆಯು ನಮಗೆ ಬೇಕಾಗಿದೆ.

## ನೆಹಮೀಯ ಸತ್ಯವೇದ ಕಾಲೇಜ್

**ನೆಹಮೀಯ ಸತ್ಯವೇದ ಕಾಲೇಜನ್ನು** ಚಟುವಟಿಕೆಗಳನ್ನು ಈ ದಿನಗಳಲ್ಲಿ ಮುಂಚಿತವಾಗಿಯೇ ವಿಸ್ತರಿಸಲು ಮತ್ತು ಬಲಪಡಿಸಲು ಕರ್ತನಾದ ದೇವರು ನಮ್ಮನ್ನು ಒತ್ತಾಯಿಸುತ್ತಿದ್ದಾನೆ. ಒಬ್ಬ ಪ್ರಖ್ಯಾತ ಸತ್ಯವೇದ ವಿದ್ವಾಂಸ ಮತ್ತು ಅರ್ಹ ಮತ್ತು ಅನುಭವಿ ಅಧ್ಯಾಪಕ ಸದಸ್ಯರ ಗುಂಪಿನ ಅಧ್ಯಕ್ಷರ ಅಡಿಯಲ್ಲಿ ಇದು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತದೆ. ನಾವು ಈಗಾಗಲೇ **ಏಷ್ಯಾ ದೇವತಾ ಶಾಸ್ತ್ರದ ಸಂಘ**ದೊಂದಿಗೆ ಮಾನ್ಯತೆಗಾಗಿ ಅರ್ಜಿ ಸಲ್ಲಿಸಿದ್ದೇವೆ. ಇದು ಭಾರತದಲ್ಲಿ ನಂ. 1 ಮಾನ್ಯತೆ ನೀಡುವ ಸಂಸ್ಥೆಯಾಗಿದೆ. ಅವರ ನಿಯಮಗಳನ್ನು ಪೂರೈಸಲು ನಾವು ಹೆಚ್ಚಿನ ಪುಸ್ತಕ ಗಳೊಂದಿಗೆ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಬೇಕು. ನಾವು ನಮ್ಮ ವಿದ್ಯಾರ್ಥಿಗಳಿಗಾಗಿ ಹೆಚ್ಚಿನ ದೇವಶಾಸ್ತ್ರದ ಪುಸ್ತಕಗಳು ಮತ್ತು ಭಕ್ತಿ ಪುಸ್ತಕಗಳನ್ನು ಸಂಗ್ರಹಿಸಲು ಪ್ರಯತ್ನಿಸುತ್ತಿದ್ದೇವೆ.

ಒಂದು ವೇಳೆ ನಿಮ್ಮ ಹತ್ತಿರ ಉಪಯೋಗಿಸಿದ ಅಥವಾ ಹೊಸ ಪುಸ್ತಕಗಳು ಇದ್ದರೆ, ಅವುಗಳನ್ನು ನಮ್ಮ ಸತ್ಯವೇದ ಕಾಲೇಜ್‌ಗೆ ದಯಮಾಡಿ ದಾನ ಮಾಡಿರಿ. ಇತ್ತೀಚಿಗೆ ಹೊರ ದೇಶದಲ್ಲಿರುವ ನನ್ನ ಸ್ನೇಹಿತರು ನಿಮಗೆ ಬೇಕಾದಷ್ಟು ಪುಸ್ತಕಗಳನ್ನು ನಿಮಗೆ ಕಾರ್ಗೊ ಮೂಲಕ ನಮ್ಮ ಸತ್ಯವೇದ ಕಾಲೇಜ್‌ಗೆ ಕಳುಹಿಸುತ್ತೇವೆ ಎಂದು ಹೇಳಿದರು, ಆದರೆ ಸರಕು ಸಾಗಣೆ ಶುಲ್ಕದ ವೆಚ್ಚವನ್ನು ನಾವು ಭರಿಸಬೇಕಾಗಿದೆ. ಇದು ನಮ್ಮ ಸಾಮರ್ಥ್ಯಕ್ಕೆ ಮೀರಿದ ದೊಡ್ಡ ಮೊತ್ತವಾಗಿದೆ. ಇದಕ್ಕಾಗಿ ನಾವು ನಿಮ್ಮ ಪ್ರಾರ್ಥನೆಯನ್ನು

**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.


CHIEF EDITORS
Pastor S. Sam Selva Raj
Angeline Selvakumari Henry, M.A., M.Ed.

MANAGING EDITOR
Pastor Alex Samson Sam, B.Th., M.Div

ADMINISTRATION
Bro. N. Prakasam, M.A., General Manger

EDITORIAL BOARD
Sis. Jesy Veena Sam
Bro. M. Paul Raj, M.A., B.Ed.
Sis. Serena Bevin, M.A., M.Phil., B.Ed.

HEAD OFFICE CO-ORDINATORS
Bro. John Rodrigues
Sis. E. Daisy Rani

ADVISORY BOARD
Adv. Jose Abraham
Adv. N. Balaji, B.Com., B.L.
Dr. S. Rabinder Boaz, M.S.
Er. C.G.S. Babu Rao, B.Tech., M.Tech (DM)
Aud. K. Puratchivendan, M.Com., B.L.

PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 95661 31858
E.mail : sam@echoofhiscall.org
biblecor@yahoo.co.in

Websites :
www.echoofhiscall.org
www.echoofhiscall.com



**Our Ministries:** ECHO OF HIS CALL Monthly Magazines (16 languages) ◘ BIBLECOR - Postal Courses (3 languages) ◘ Theological Correspondence Courses (2 languages) ◘ Church Planting ◘ Nehemiah Bible Colleges ◘ Gospel Printing Press ◘ Great Commission Partners ◘ St. Paul's Matriculation School ◘ Crusades ◘ Community Development

ಕೋರುತ್ತೇವೆ. ಈ ದೊಡ್ಡ ಅಗತ್ಯತೆಗಾಗಿ ದಯಮಾಡಿ ನೀವು ಪ್ರಾರ್ಥಿಸಿರಿ ಮತ್ತು ಒಂದು ವೇಳೆ ಕರ್ತನು ನಿಮ್ಮನ್ನು ಪ್ರೇರೇಪಿಸಿದರೆ. ಪ್ರಿಯರೇ, ಈ ಪುಸ್ತಕಗಳು ನಮಗೆ ಬೇಕಾಗಿವೆ, ಪುಸ್ತಕದ ಮಳಿಗೆಗಳು, ಗ್ರಂಥಾಲಯದ ಮೇಜುಗಳು, ಗಣಕ ಯಂತ್ರ ಮುಂತಾದವುಗಳು. ನಮ್ಮ ಸತ್ಯವೇದ ಕಾಲೇಜ್‌ಗೆ ತುರ್ತಾಗಿ ನಮಗೆ ಬೇಕಾಗಿದೆ.

### ಸಂತ. ಪೌಲ ಮೇರ್ಟ್‌ಕೇಲುಸನ್ ಶಾಲೆ

ಮತ್ತೊಂದು ಕಡೆ, ಕಥಾ ಪುಸ್ತಕಗಳಂತಹ ಪ್ರಕೃತಿಯಲ್ಲಿ ಸಾಮಾನ್ಯವಾಗಿರುವ **ಗ್ರಂಥಾಲಯ ಪುಸ್ತಕಗಳು, ಕಥೆಗಳು, ನೋವೆಲ್ಸ್, ಪೆಬಲ್ಸ್, ಶಬ್ದಕೋಶಗಳು, ಪಜಲ್ಸ್, ಪದಗಳ ಪುಸ್ತಕಗಳು, ನಾಟಕದ ಪುಸ್ತಕಗಳು ನಮ್ಮ ಸಚಿತ ಪೌಲ ಮೇರ್ಟ್ ಕೇಲುಸನ್** ಶಾಲೆಗೆ ಬೇಕಾಗಿವೆ. ಬಡಮಕ್ಕಳು ಗ್ರಂಥಾಲಯ ಪುಸ್ತಕಗಳನ್ನು ಸಂಗ್ರಹಿಸುವಲ್ಲಿ ನಿಮ್ಮ ಸಹಾಯ ಹಸ್ತವನ್ನು ನಿರೀಕ್ಷಿಸುತ್ತಿದ್ದಾರೆ. ದೇವರು ನಿಮ್ಮನ್ನು ಪ್ರೇರೇಪಿಸಿದರೆ ನೀವು ಸಹ ಮಾಡಬಹುದು.

ಪ್ರೀತಿಯ ಸಹೋದರ ಸಹೋದರಿಯರೇ, ನಾವು ದೇವರ ಸೈನ್ಯದ ಮಂಚೂಣಿ ಯಲ್ಲಿರುವ ನಮ್ಮಂತಹ ವ್ಯಕ್ತಿಗಳಿಗೆ ಪ್ರಸ್ತುತ ದಿನಗಳು ಅನುಕೂಲಕರವಾಗಿಲ್ಲ ಎಂದು ನಿಮಗೆ ತಿಳಿದಿರಬಹುದು. ನಮ್ಮ ಆರೋಗ್ಯ, ಸೇವಾ ಕ್ಷೇತ್ರಗಳು, ಆಡಳಿತ, ಹಣಕಾಸು ಇತ್ಯಾದಿಗಳಲ್ಲಿ ನಾವು ದೊಡ್ಡ ಸೈತಾನನ ಸವಾಲುಗಳನ್ನು ಮತ್ತು ಬೆದರಿಕೆಗಳನ್ನು ಎದುರಿಸುತ್ತಿದ್ದೇವೆ. ದೇವರಾತ್ಮನು ನಾವು ಹಾದು ಹೋಗುವ ಸಮಸ್ಯೆಗಳನ್ನು ನಿಮಗೆ ಪ್ರಕಟಪಡಿಸಲಿ. ನಿಜ ವಾಗಿಯೂ ನಿಮ್ಮ ಸಹಾಯ ಮತ್ತು ಪ್ರಾರ್ಥನೆಯು ನಮಗೆ ಬೇಕಾಗಿದೆ. ಜಗತ್ತಿನಲ್ಲಿ ಯಾರಾದರೂ ನಮ್ಮ ಯೋಗ ಕ್ಷೇಮದ ಬಗ್ಗೆ ಕಾಳಜಿ ವಹಿಸಿದ್ದಾರೆಂದರೆ ನಮಗೆ ತಿಳಿದರೆ ಸಮಾಧಾನವಾಗುತ್ತದೆ. ಕರ್ತನಾದ ಯೇಸು ಕ್ರಿಸ್ತನಲ್ಲಿ ನಿಮ್ಮನ್ನು ನಾವು ಹೆಚ್ಚು ಪ್ರೀತಿಸುತ್ತೇವೆ.

ಕೊನೆಯದಾಗಿ, ನಮ್ಮ ಪತ್ರಿಕೆಯನ್ನು ಓದುವ ಹಳೆಯ ಸ್ನೇಹಿತರು ಅವರಿಗೆ ವಯಸ್ಸಾಗುತ್ತಾ ಬರುತ್ತಾ ಇದೆ ಮತ್ತು ಸಹಾಯ ಮಾಡುವ ಶಕ್ತಿಯಿಲ್ಲ, ಕೆಲವರು ತಮ್ಮ ವಿಳಾಸವನ್ನು ಬದಲಾವಣೆ ಮಾಡಿದ್ದಾರೆ. ಅವರು ನಮಗೆ ಸರಿಯಾಗಿ ತಿಳಿಸಲಾಗಿಲ್ಲ ಮತ್ತು ಇದರ ಪರಿಣಾಮವಾಗಿ ನಮ್ಮ ಬಹಳಷ್ಟು ಪತ್ರಿಕೆಗಳು ಮರಳಿ ಬರುತ್ತಿವೆ. ಮುಂದಿನ ಪೀಳಿಗೆಗೆ ಸುವಾರ್ತೆಯನ್ನು ಕಳುಹಿಸಲು ನಾವು ಹೊಸ ಓದುಗರ ವಿಳಾಸಗಳನ್ನು ಕಂಡು ಹಿಡಿಯ ಬೇಕಾಗಿದೆ. ಆದ್ದರಿಂದ, ಕೆಲವು ನಿಮಿಷಗಳನ್ನು ತೆಗೆದುಕೊಂಡು ನಿಮ್ಮಿಂದ ದೂರವಿರುವ ನಿಮ್ಮ ಪ್ರೀತಿ ಪಾತ್ರರು ಮತ್ತು ಕುಟುಂಬ ಸದಸ್ಯರ ಹೆಸರುಗಳು ಮತ್ತು ವಿಳಾಸಗಳನ್ನು ಬರೆಯುವಂತೆ ನಾವು ದಯೆಯಿಂದ ವಿನಂತಿಸುತ್ತೇವೆ. (ಸಾಧ್ಯವಾದರೆ ಅವರ ಇ-ಮೇಲ್ ಇಡಿ, ಮೊಬೈಲ್ ನಂಬರ್) ನಮಗೆ ಇ-ಮೇಲ್ ಅಥವಾ ಅಂಚೆ, ವ್ಯಾಟ್ಸಾಪ್ ಮೂಲಕ ಕಳುಹಿಸಿರಿ. ಆತನ ಕರೆಯ ಪ್ರತಿಧ್ವನಿಯ 17 ಭಾಷೆಗಳಲ್ಲಿ ಒಂದನ್ನು ಪ್ರತಿ ತಿಂಗಳು ಅವರಿಗೆ ಉಚಿತವಾಗಿ ಕಳುಹಿಸಲು ನಾವು ಸಂತೋಷ ಪಡುತ್ತೇವೆ.

**ದೇವರು ನಿಮ್ಮನ್ನು ಆಶೀರ್ವದಿಸಲಿ**

**ಯೇಸು ಕ್ರಿಸ್ತನಲ್ಲಿ ನಿಮ್ಮ ಸೇವಕ ಪಾ. ಎಸ್ ಸ್ಯಾಮ್ ಸೆಲ್ವರಾಜ್**

**98412 71858 / 98410 71858**

---

*(1ನೇ ಪುಟದಿಂದ)*

ವಿರಬಹುದು. ಆದರೆ ನಿಮಗೆ ಈ ಹೊತ್ತು ನಿಮಗೆ ಶುಭ ಸಂದೇಶವುಂಟು! ನಿಮ್ಮ ದೇವರಾದ ಯೇಸು ಕ್ರಿಸ್ತನನ್ನು ನೀವು ಹೊಂದಿದ್ದೀರಿ! ಆತನು ನಿಮ್ಮನ್ನು ಅನುದಿನವೂ ತನ್ನ ವಾಕ್ಯಗಳಿಂದ ಉಣ ಬಡಿಸುವನು! ಈ ಅಮೂಲ್ಯವಾದ ಮಾತುಗಳು ಎಂದಿಗೂ ನೆಲಕ್ಕೆ ಬೀಳುವುದಿಲ್ಲ. ಆತನ ಮಾತು ಗಳಿಂದ ಆಶೀರ್ವದಿಸಲ್ಪಡುವ ಸಲುವಾಗಿ ನೀವು ಮುಂಜಾನೆ ಎದ್ದು ಆತನಿಗೆ ಪ್ರಾರ್ಥಿಸಬೇಕು, ಪರಿಶುದ್ಧ ಸತ್ಯವೇದವನ್ನು ಓದಬೇಕು ಮತ್ತು ಆ ದಿನದ ವಾಕ್ಯವನ್ನು ಸ್ವೀಕರಿಸುವುದಕ್ಕಾಗಿ ಆತನ ಸನ್ನಿಧಿಯಲ್ಲಿ ತಾಳ್ಮೆಯಿಂದ ಕಾಯಬೇಕು. ಈ ಅಭ್ಯಾಸವು ಕೇವಲ ಒಂದು ಅಥವಾ ಎರಡು ದಿನಗಳಲ್ಲಿ ಇರಬಾರದು, ಆದರೆ ನಿಮ್ಮ ಜೀವತ ಕಾಲವೆಲ್ಲಾ ಇರಬೇಕು.

ಯೆಹೋವನು ಶೀಲೋವಿನಲ್ಲಿ ದರ್ಶನ ಕೊಡುವುದಕ್ಕೆ ಪ್ರಾರಂಭಿಸಿ ತನ್ನ ವಾಕ್ಯದಿಂದ ಸಮುವೇಲನಿಗೆ ತನ್ನನ್ನು ಪ್ರಕಟಿಸಿಕೊಳ್ಳುತ್ತಾ ಬಂದನು. ಸಮುವೇಲನು ಇಸ್ರಾಯೇಲ್ಯರಿಗೆ ದೈವೋತ್ತರಗಳನ್ನು ತಿಳಿಸುತ್ತಿದ್ದನು. ಇಸ್ರಾಯೇಲ್ಯರು ಫಿಲಿಷ್ಟಿಯರಿಗೆ ವಿರೋಧವಾಗಿ ಯುದ್ಧಕ್ಕೆ ಹೊರಟು ಎಬೆನೆಜೆರಿನ ಸಮೀಪದಲ್ಲಿ ಪಾಳೆಯ ಮಾಡಿಕೊಂಡರು; ಫಿಲಿಷ್ಟಿಯರು ಒಂದು ಅಫೇಕಿ ನಲ್ಲಿ ಇಳಕೊಂಡರು (1 ಸಮುವೇಲ 3:1.4:1).

ದೇವರ ವಾಕ್ಯವು ಹೇಳುತ್ತದೆ ದೇವರ ಪ್ರವಾದನೆಗಳು ಒಂದೂ ಬಿದ್ದು ಹೋಗಲಿಲ್ಲ (1 ಸಮುವೇಲ 3:19). ಇದಕ್ಕೆ ಅನೇಕ ಕಾರಣ ಗಳು ಉಂಟು. ಯಾವಾಗ ಕರ್ತನಾದ ಯೇಸು ಕ್ರಿಸ್ತನು ಒಬ್ಬ ವ್ಯಕ್ತಿಯನ್ನು ತನ್ನ ಕೈಯಲ್ಲಿ ತೆಗೆದು ಕೊಂಡು ಉಪಯೋಗಿಸುತ್ತಾನೆ, ಇದು ತಾತ್ಕಾಲಿಕ ಸಂಗತಿಯಲ್ಲಿ. ಅದು ನಿರಂತರವಾದದ್ದು. ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯ ವನ್ನು ಸಾಧಿಸುವನು (1 ಥೆಸಲೋನಿಕ 5:24).

2 ಕೋರಿಂಥ 6:4 ರಲ್ಲಿ ನಾವು ಓದುತ್ತೇವೆ. ಇಸ್ರಾಯೇಲ್ಯರ ಕರ್ತನಾದ ದೇವರು ಆಶೀರ್ವದಿ ಸಲಿ, ಆತನು ತನ್ನ ಕೈಗಳಿಂದ ಮಾತಾಡಿದ್ದನು ತನ್ನ ಬಾಯಿಂದ ಮಾತಾಡಿದನು. ಯೆಶಾಯ 46:4 ರಲ್ಲಿ ಆತನ ವಾಗ್ದಾನ, ನಿಮ್ಮ ಮುಪ್ಪಿನ ತನಕ ನಾನೇ ಆಧಾರ, ನರೆ ಬಂದಾಗಲೂ ನಿಮ್ಮನ್ನು ಹೊತ್ತು ಸಹಿಸುವೆನು; ನಾನೇ ಉಂಟು ಮಾಡಿದೆನು, ನಾನೇ ಹೊರುವೆನು, ಹೌದು, ನಿಮ್ಮನ್ನು ಹೊತ್ತು ಸಹಿಸಿ ನಿರ್ವಹಿಸುವೆನು. ಆದುದರಿಂದ ಚಿಂತಿಸಿದಿರಿ. ನಿಮ್ಮ ಪರಿಸ್ಥಿತಿಯು ಕೆಟ್ಟದ್ದಾಗಿ ಹಾದು ಹೋಗಿರಬಹುದು. ಆದರೆ ಕರ್ತನಾದ ಯೇಸುಕ್ರಿಸ್ತನು ಅದನ್ನು ಸರಿಯಾಗಿ ಹೊಂದಿಸುವನು.

ದೇವರ ಮನುಷ್ಯನಾದ ಸಮುವೇಲನ ಆರಂಭದ ಜೀವಿತದಿಂದ, ಪ್ರಭುವಾದ ದೇವರ ಪ್ರಬಲ ಕಾರ್ಯಗಳು ಅವನ ಜೀವನದ ಕೊನೆ ಯವರೆಗೂ ನಿಜವೆಂದು ಸಾಬೀತಾಯಿತು. ಅದೇ ರೀತಿಯಾಗಿ ಆತನು ದೊಡ್ಡ ಕಾರ್ಯಗಳನ್ನು ಮಾಡಿ ಮತ್ತು ನಿಮ್ಮ ಜೀವಿತ ದಲ್ಲಿಯೂ ಕೂಡ ಆತನ ವಾಗ್ದಾನಗಳನ್ನು ನೆರವೇರಿಸುವನು.

### ಮೊದಲನೆಯದಾಗಿ, ಸಮುವೇಲನ ಬಾಲ್ಯಜೀವಿತ

ಎಲ್ಕಾನನು ರಾಮದಲ್ಲಿದ್ದ ತನ್ನ ಮನೆಗೆ ಹೋದನು; ಹುಡುಗನು ಯಾಜಕನಾದ ಏಲಿಯ ಕೈಕೆಳಗಿದ್ದು ಕೊಂಡು ಯೆಹೋವನನ್ನು ಸೇವಿಸುತ್ತಿದ್ದನು. ಏಲಿಯ ಮಕ್ಕಳು ಬಹುದುಷ್ಟರಾಗಿದ್ದರು; ಅವರು ಯೆಹೋವನನ್ನು ಲಕ್ಷಿಸುತ್ತಿರಲಿಲ್ಲ (1 ಸಮುವೇಲ 2:11-12). ಹೀಗೆ ಆ ಯೌವ್ವನಸ್ಥರು ನೈವೇದ್ಯವನ್ನು ತುಚ್ಛೀಕರಿಸಿದ್ದರಿಂದ ಅವರ ಅಪರಾಧವು ಆತನ ದೃಷ್ಟಿಯಲ್ಲಿ ಅಧಿಕವಾಯಿತು. ಯಾಕೆಂದರೆ ಪುರುಷರು ದೇವರು ಕಾಣಿಕೆಯನ್ನು ಅಸಹ್ಯ ಪಡುತ್ತಾನೆ (1 ಸಮುವೇಲ 2:17,18).



ಸತ್ಯವೇದವು ಹೇಳುತ್ತದೆ, ಹೊಫ್ನಿ, ಫೀನೆ ಹಾಸ್ ಏಲಿ ಮಕ್ಕಳು ಅನೇಕ ಪಾಪದ ಚಟುವಟಿಕೆ ಗಳಲ್ಲಿ ತೊಡಗಿಸಿ ಕೊಂಡಿದ್ದರು (1 ಸಮುವೇಲ 2:13-17,24). ಇಸ್ರಾಯೇಲ್ಯರಲ್ಲಿ ಇಂತಹ ದುಷ್ಟ ಕಾರ್ಯಗಳನ್ನು ಮಾಡಬಾರ ದೆಂದು ಏಲಿ ಸಲಹೆ ಕೊಟ್ಟಾಗ್ಯೂ, ಅವರು ಕೇಳಲಿಲ್ಲ, ಬೇಡ ನನ್ನ ಮಕ್ಕಳೇ! ಎಂದು ಏಲಿ ಅವರಿಗೆ ಹೇಳಿದನು. ಯಾಕೆಂದರೆ ನಾನು ಕೇಳುವ ಉತ್ತಮ ವರದಿಯಲ್ಲ. ನೀವು ಕರ್ತನ ಜನರನ್ನು ಅತಿಕ್ರಮಿಸುವಿರಿ. ಒಂದು ವೇಳೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ವಿರೋಧವಾಗಿ ಪಾಪ ಮಾಡಿದರೆ, ದೇವರು ಅವನಿಗೆ ನ್ಯಾಯ ತೀರಿಸುವನು. ಆದರೆ ಒಂದು ವೇಳೆ ಮನುಷ್ಯನು ದೇವರಿಗೆ ವಿರುದ್ಧ ವಾಗಿ ಪಾಪ ಮಾಡಿದರೆ... ಆತನ ಪರವಾಗಿ ಯಾರು ವಿಜ್ಞಾಪಿಸುವರು? (1 ಸಮುವೇಲ 2:24,25).

ಇಂತಹ ಪರಿಸ್ಥಿತಿಗಳಲ್ಲಿ, ಹುಡುಗ ನಾದ ಸಮುವೇಲನು ದೇವರ ಸೇವೆ ಮಾಡುತ್ತಿ ದ್ದನು. ಚಿಕ್ಕ ಹುಡುಗನು ಹೇಗೆ ದೇವರ ಸೇವೆ ಮಾಡಲಿಕ್ಕೆ ಸಾಧ್ಯ?

ಸಮುವೇಲನ ತಂದೆ-ತಾಯಿಗಳು ಯಾಜಕ ನಾದ ಏಲಿ ಮುಂದೆ ದೇವಾಲಯದಲ್ಲಿ ಬಿಟ್ಟು ಹೋದರು. ಆ ಹುಡುಗನು ಬಹಳ ಕಾಳಜಿಯಿಂದ ದೇವರ ಸೇವೆಯನ್ನು ಏಲಿ ಮಾಡುವಾಗ ಎಲ್ಲವನ್ನೂ ನೋಡಲಿಕ್ಕೆ ಆರಂಭಿಸಿದನು. ಏಲಿ ಪ್ರಾರ್ಥಿಸುತ್ತಿರುವಾಗ, ಹುಡುಗನಾದ ಸಮು ವೇಲನು ಕೂಡ ಆತನು ತನ್ನ ಕೋಮಲವಾದ ಕಾಲುಗಳಿಂದ ಮೊಣಕಾಲಿನಲ್ಲಿ ಇರುತ್ತಿದ್ದನು.

ಆತನು ತನ್ನ ಕಣ್ಣುಗಳನ್ನು ಮುಚ್ಚಿ ತನ್ನದೇ ಆದ ಭಾಷೆಯಲ್ಲಿ ದೇವರನ್ನು ಸ್ತುತಿಸುತ್ತಿದ್ದನು ಮತ್ತು ಕರ್ತನಾದ ದೇವರಿಗೆ ವಂದನೆಗಳನ್ನು ಸಲ್ಲಿಸುತ್ತಿದ್ದನು! ಯಾವಾಗ ಏಲಿ ಕಣ್ಣುಗಳನ್ನು ತೆರೆದಾಗ, ಸಮುವೇಲನು ಪ್ರಾರ್ಥಿಸುತ್ತಿರುವುದನ್ನು ಏಲಿ ನೋಡಿರಬಹುದು. ಆದುದರಿಂದ, ಏಲಿ, ತನ್ನ ಪ್ರೀತಿಯ ಕೈಗಳಿಂದ ಸಮುವೇಲನನ್ನು ಬೆನ್ನು ತಟ್ಟಿರಬಹುದು. ಆ ಸಮಯದಲ್ಲಿ ಏಲಿ ಸಮುವೇಲನನ್ನು ಆಶೀರ್ವದಿಸಿರಬಹುದು.

ಸತ್ಯವೇದವು ನಮಗೆ ಹೇಳುತ್ತದೆ, ಬಾಲಕನಾದ ಸಮುವೇಲನು ಏಫೋದೆಂಬ ನಾರು ಮಡಿಯನ್ನು ತೊಟ್ಟುಕೊಂಡು ಯೆಹೋವನ ಸಾನಿಧ್ಯ ಸೇವೆಯನ್ನು ಮಾಡುತ್ತಿದ್ದನು. ಅವನ ತಾಯಿಯು ಪ್ರತಿ ವರುಷವೂ ಗಂಡನ ಜೊತೆಯಲ್ಲಿ ಯಜ್ಞವನ್ನರ್ಪಿಸುವುದಕ್ಕೆ ಬಂದಾಗ ಒಂದು ಚಿಕ್ಕ ಅಂಗಿಯನ್ನು ಹೊಲಿದು ಅವನಿಗೆ ತಂದು ಕೊಡುತ್ತಿದ್ದಳು (1 ಸಮುವೇಲ 2:18-19). ಏಫೊದ್ ಉಡುಪನ್ನು ಸಾಮಾನ್ಯವಾಗಿ ಹಿರಿಯ ಯಾಜಕನು ಅತ್ಯಂತ ಪವಿತ್ರ ಸ್ಥಳಕ್ಕೆ ಪ್ರವೇಶಿದಾಗ ಧರಿಸುತ್ತಿದ್ದನು.

ಸಮುವೇಲನು ಇನ್ನೂ ಬಾಲಕನಾಗಿದ್ದಾಗ, ಅವನ ತಾಯಿ ಹನ್ನ ತನ್ನ ಮಗನಿಗಾಗಿ ಪುರೋಹಿತರು ಧರಿಸಿರುವಂತೆ ಉಡುಪನ್ನು ಹೋಲಿಸಿರಬೇಕು. ನನ್ನ ತಾಯಿಯು ನಮ್ಮ ಸಭಾ ಪಾಲಕರು ಹಾಕಿಕೊಳ್ಳುವ ಅಂಗಿಯ ತರಹ ಹಾಗೆ ನನಗೆ ಹೋಲಿಯುತ್ತಿದ್ದದ್ದು ನನಗೆ ಜ್ಞಾಪಕ ಬರುತ್ತದೆ! ಆಕೆಯು ಆ ಉಡುಪಿನಲ್ಲಿ ನನ್ನನ್ನು ನೋಡಿ ಆನಂದಿಸುತ್ತಿದ್ದಳು. ಅನೇಕ ಜನರು ನಮ್ಮ ಸಭೆಯಲ್ಲಿ ಆ ಉಡುಪನ್ನು ಹಾಕಿಕೊಂಡು ನಡೆದಾಡುವುದನ್ನು ನೋಡಿದ್ದಾರೆ. ನಾನು ಅನೇಕ ಜನರ ಮುಂದೆ ಬೋಧಿಸುವ ಪಾದ್ರಿಯಂತೆ ಅನೇಕರು ನಾನು ಆಡುವುದನ್ನು ನೋಡಿದ್ದಾರೆ. ಆದುದರಿಂದ, ನಾನು ಒಳ್ಳೆಯವನಾಗುತ್ತಾನೆ ಎಂದು, ಭವಿಷ್ಯತ್ತಿನಲ್ಲಿ ದೇವರ ಸೇವಕನಾಗುತ್ತಿ ಎಂದು ಅವರು ಪ್ರತಿಕ್ರಿಯಿಸಿದರು.

ಈ ಹೊತ್ತಿನ ತಂದೆ-ತಾಯಿಗಳನ್ನು ನೋಡಿರಿ! ಮಗು ಹುಡುಗನಾಗಲಿ ಅಥವಾ ಹುಡುಗಿಯಾಗಲಿ ಅವರು ತಮ್ಮ ಮಕ್ಕಳಿಗಾಗಿ ಆಧುನಿಕ ಉಡುಪುಗಳನ್ನು ಆಲ್ಟ್ರಾ ಮಾಡುತ್ತಾರೆ. ಆದುದರಿಂದ ಅವರು ಸಿನಿಮಾ ತಾರೆಯರ ಹಾಗೆ ಅಥವಾ ಜೋಕರ್‌ಗಳ ಹಾಗೆ ಕಾಣುತ್ತಾರೆ! ಪೋಷಕರು ತಮ್ಮ ಮಕ್ಕಳನ್ನು ಲೌಕಿಕ ಜೀವನ ಶೈಲಿಗೆ ಕರೆದೊಯ್ಯುತ್ತಾರೆ. ಮಕ್ಕಳು ತಮ್ಮ ಕೇಶ ಶೈಲಿಯನ್ನು ಕುರುಪಿಯಾಗಿ ನಿರ್ವಹಿಸುತ್ತಾರೆ ಮತ್ತು ಚಿಕ್ಕ ವಯಸ್ಸಿನಲ್ಲಿಯೇ ಮಾಂಸದ ಕಾಮಕ್ಕೆ ಬಲಿಯಾಗುತ್ತಾರೆ. ರಾತ್ರಿಯು ದೂರದಲ್ಲಿದೆ, ದಿನವು ಕೈಯಲ್ಲಿದೆ. ಆದುದರಿಂದ ನಾವು ಕತ್ತಲೆಯ ಕಾರ್ಯಗಳನ್ನು ಬಿಡೋಣ ಮತ್ತು ಬೆಳಕಿನ ರಕ್ಷಾ ಕವಚವನ್ನು ಧರಿಸೋಣ. ನಾವು ಹಗಲಿನಲ್ಲಿ ಸರಿಯಾಗಿ ನಡೆಯೋಣ ಮತ್ತು ವಿನೋದ ಮತ್ತು ಕತ್ತಲೆಯಲ್ಲಿ ಅಲ್ಲ, ನೀಚತನ ಮತ್ತು ಕಾಮದಲ್ಲಿ ಅಲ್ಲ, ಕಲಹ ಮತ್ತು ಅಸೂಯೆ ಅಲ್ಲ. ಕಾಮ ವಿಲಾಸ ನಿರ್ಲಜ್ಜಾ ಕೃತ್ಯಗಳಲ್ಲಿಯಾಗಲಿ ಕಾಲ ಕಳೆಯದೆ ಹಗಲು ಹೊತ್ತಿಗೆ ತಕ್ಕ ಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ. ದೇಹದ ಆಶೆಗಳನ್ನು ಪೂರೈಸುವುದಕ್ಕಾಗಿ ಚಿಂತಿಸದೆ ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ (ರೋಮ 13:12-13).

## ಒಂದು ಅನುಭವ

ಒಂದು ಸಾರಿ ನಾನು ಒಂದು ನಿರ್ದಿಷ್ಟ ಸ್ಥಳಕ್ಕೆ ಸೇವೆಗೆ ಹೋಗಿರುವಾಗ ಒಬ್ಬ ದೇವರ ಸೇವಕ ಮತ್ತು ಅತನ ಕುಟುಂಬವನ್ನು ಭೇಟಿಯಾಗುವ ಅವಕಾಶವು ನನಗೆ ದೊರೆಯಿತು. ನಾನು ಆ ದೇವರ ಸೇವಕನೊಂದಿಗೆ ಮಾತನಾಡುತ್ತಿರುವಾಗ, ನಮ್ಮ ಮುಂದೆ ಒಬ್ಬ ವ್ಯಕ್ತಿಯು ಕಿವಿಯಲ್ಲಿ ಉಂಗುರವನ್ನು, ಸರಪಳಿಯನ್ನು ಒಬ್ಬ ಯೌವ್ವನಸ್ಥ ಹುಡುಗಿಯ ಹಾಗೆ ಹಾಕಿಕೊಂಡಿದ್ದನು. ನಾನು ಅವರನ್ನು ಆತನ ಮಗಳು ಏನು ಓದುತ್ತಿದ್ದಾಳೆಂದು ಕೇಳಿದೆನು. ಆತನು ನನಗೆ ಆತನ ಮಗಳು ಅಲ್ಲ, ಆತನ ಮಗನೆಂದು ಹೇಳಿದನು! ಈ ಪಟ್ಟಣದಲ್ಲಿ ಒಂದು ಕ್ರೈಸ್ತ ಯೌವ್ವನಸ್ಥರ ಸಭೆ ಇದೆ ಎಂದು ಹೇಳಿದನು. ಆ ಸಭೆಯ ಎಲ್ಲಾ ಗಂಡು ಮಕ್ಕಳು ಹೆಣ್ಣು ಮಕ್ಕಳ ಹಾಗೆ ಉಡುಪನ್ನು ಧರಿಸುತ್ತಾರೆ ಮತ್ತು ಹೆಣ್ಣು ಮಕ್ಕಳ ಮತ್ತು ಹುಡುಗಿಯರ ಹಾಗೆ ಕಾಣುತ್ತಾರೆ! ನಾವು ಇನ್ನೂ ಮಾತನಾಡುತ್ತಿರುವಾಗ, ಇನ್ನೊಬ್ಬ ಯೌವ್ವನಸ್ಥ ಹುಡುಗನು ಒಳಗೆ ಬಂದನು. ಈ ಹುಡುಗನು ಯಾರು ಎಂದು ನಾನು ಆತನನ್ನು ಕೇಳಿದೆನು? ಆತನು ಬಹಳ ನಿರಾಸೆಯಿಂದ ಇದು ನನ್ನ ಮಗ ಅಲ್ಲ, ನನ್ನ ಮಗಳು ಎಂದು ಹೇಳಿದನು. ಸೈತಾನನು ತನ್ನ ಗ್ರಹಣಾಂಗಗಳನ್ನು ಅನೇಕ ಕ್ರೈಸ್ತ ಕುಟುಂಬಗಳ ಮೇಲೆ ಬಿಗಿಯಾಗಿ ಹರಡುತ್ತದೆ ಮತ್ತು ಅವರನ್ನು ನರಕಕ್ಕೆ ಕರೆದೊಯ್ಯುತ್ತದೆ.

ನೀವು ಹೇಗೆ ನಡೆದು ದೇವರನ್ನು ಮೆಚ್ಚಿಸಬೇಕೋ ಅದನ್ನು ನಮ್ಮಿಂದ ಕಲಿತುಕೊಂಡು ಅದರಂತೆ ನಡೆಯುತ್ತಲೇ ಇದ್ದೀರಿ. ನೀವು ಹಾಗೆಯೇ ಇನ್ನೂ ಹೆಚ್ಚಾಗಿ ನಡೆಯಬೇಕೆಂದು ನಿಮ್ಮನ್ನು ಬೇಡಿಕೊಂಡು ಯೇಸು ಕರ್ತನಲ್ಲಿ ಪ್ರಬೋಧಿಸುತ್ತೇವೆ. ದೇವರ ಚಿತ್ತವೇನಂದರೆ ನೀವು ಶುದ್ಧರಾಗಿ ಇರಬೇಕೆಂಬದೇ. ಆದುದರಿಂದ ಹಾದರಕ್ಕೆ ದೂರವಾಗಿರಬೇಕು. ದೇವರನ್ನರಿಯದ ಅನ್ಯ ಜನಗಳಂತೆ ಕಾಮಾಭಿಲಾಷೆಗೆ ಒಳಪಡದೆ ನಿಮ್ಮಲ್ಲಿ ಪ್ರತಿಯೊಬ್ಬನು ಪವಿತ್ರವಾದ ಮನಸ್ಸಿನಿಂದಲೂ ಘನತೆಯಿಂದಲೂ ಧರ್ಮಪತ್ನಿಯನ್ನು ಸಂಪಾದಿಸಿಕೊಳ್ಳಲು ತಿಳಿಯಬೇಕು. ಈ ವಿಷಯದಲ್ಲಿ ಯಾರು ತನ್ನ ಸಹೋದರರನ್ನು ವಂಚಿಸಿ ಕೇಡು ಮಾಡಬಾರದು. ನಾವು ಮುಂಚೆ ತಿಳಿಸಿ ನಿಮಗೆ ಖಂಡಿತವಾಗಿ ಹೇಳಿದ ಪ್ರಕಾರ ಇವೆಲ್ಲವುಗಳ ವಿಷಯದಲ್ಲಿ ಕರ್ತನು ಮುಯ್ಯಿಗೆ ಮುಯ್ಯಿ ತೀರಿಸುವವನಾಗಿದ್ದಾನೆ. ದೇವರು ನಮ್ಮನ್ನು ಬಂಡುತನಕ್ಕೆ ಕರೆಯದೆ ಶುದ್ಧರಾಗಿರುವುದಕ್ಕೆ ಕರೆದನು. ಹೀಗಿರಲು ಈ ಮಾತನ್ನು ತಾತ್ಸಾರ ಮಾಡುವವನು ಮನುಷ್ಯನನ್ನು ತಿರಸ್ಕರಿಸುವುದು ಮಾತ್ರ ವಲ್ಲದೆ ಪವಿತ್ರಾತ್ಮವರ ವನ್ನು ನಿಮಗೆ ದಯ ಪಾಲಿಸುವ ದೇವರನ್ನೂ ತಿರಸ್ಕರಿಸುತ್ತಾನೆ (1 ಥೆಸಲೋನಿಕ 4:2-8).

ಸಮುವೇಲನು ಜೀವನದ ಪಯಣದಲ್ಲಿ, ದೇವರ ಯಾವುದೇ ಮಾತುಗಳು ನೆಲಕ್ಕೆ ಬೀಳಲಿಲ್ಲ. ಪ್ರೀತಿಯ ಪೋಷಕರೇ, ನಿಮ್ಮ ಮಕ್ಕಳನ್ನು ಹೇಗೆ ಬೆಳೆಸುತ್ತಾ ಇದ್ದೀರೀ?

## ಎರಡನೆಯದಾಗಿ, ಸಮುವೇಲನ ಯೌವ್ವನ



ಹೀಗೆ ಆ ಯೌವ್ವನಸ್ಥರು ನೈವೇದ್ಯವನ್ನು ತುಚ್ಛೀಕರಿಸಿದ್ದರಿಂದ ಅವರ ಅಪರಾಧವು ಆತನ ದೃಷ್ಟಿಯಲ್ಲಿ, ಅಧಿಕವಾಯಿತು. ಯಾಕೆಂದರೆ ಪುರುಷರು ದೇವರು ಕಾಣಿಕೆಯನ್ನು ಅಸಹ್ಯ ಪಡುತ್ತಾನೆ. ಬಾಲಕನಾದ ಸಮವೇಲನಾದರೋ ಬೆಳೆಯುತ್ತಾ ಬಂದ ಹಾಗೆಲ್ಲಾ ಯೆಹೋವನ ಮತ್ತು ಮನುಷ್ಯರ ದಯೆಗೆ ಪಾತ್ರನಾದನು (1 ಸಮುವೇಲ 2:17,26).

ಸಂಪೂರ್ಣವಾಗಿ ಏಲಿ ಮಕ್ಕಳು ಪಾಪದಲ್ಲಿ ಜೀವಿಸುತ್ತಾ ಇದ್ದರು. ಆದರೆ ಇನ್ನೊಂದ ಕಡೆ ಸಮುವೇಲನು ಒಬ್ಬ ಯೌವ್ವನಸ್ಥ ಹುಡುಗನಾಗಿ


### A Loving Request To Our Dear Brothers & Sisters

As you are aware, we are hard-pressed to meet several needs like the salary of the staff, expenses for the purchase of paper and also the travel expenses. Generally we never ask others to meet our financial needs. But we request those who truly love this ministry to send their offerings through **Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram** or through any other methods and support us in this Ministry. When you send your support please give an intimation to us by SMS, WhatsApp or Phone Call. We are so thankful to those who are supporting us. **The Lord will surely bless you.**

**"... A brother is born for adversity".**
Proverbs 17:17

**- Editor, Echo of His Call**
98412 71858 / 98410 71858
E.mail : sam@echoofhiscall.org

GREAT COMMISSION PARTNERS

ECHO OF HIS CALL MINISTRIES SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ.6:2), ಪ್ರೋತ್ಸಾಹಿಸುವುದು (ರೋಮಾಪುರ.12:13 )

ತ್ವರಿತಗೊಳಿಸುವುದು ( II ತಿಮೋಥಿ. 1:6 )

ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು 19 ಮಾರ್ಚ್ 2021ರಿಂದ 18 ಎಪ್ರಿಲ್ 2021 ರ ವರೆಗೆ

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

## ಸ್ತೋತ್ರಕ್ಕಾಗಿ ಅಂಶಗಳು

| | |
|---|---|
| ಮೇ 19 | : ಆತನ **ಕರೆಯ ಪ್ರತಿಧ್ವನಿ**ಯ ಸೇವೆಗಾಗಿ ನಾವು ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಮೇ 20 | : ನಮ್ಮ ಮುಖ್ಯ ಸಭೆಯ ಹಿರಿಯ ಸದಸ್ಯರುಗಳಿಗಾಗಿ ನಾವು ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಮೇ 21 | : ನಮ್ಮ ಮುಖ್ಯ ಸಭೆಯ ಎಲ್ಲಾ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಆಶೀರ್ವದಿಸಲ್ಪಟ್ಟಿದ್ದಾರೆ. |
| ಮೇ 22 | : ನಮ್ಮ ಸುವಾರ್ತೆ ಮುದ್ರಣಾಲಯದಲ್ಲಿ ಆತನ **ಕರೆಯು ಪ್ರತಿಧ್ವ**ನಿಯ ಪತ್ರಿಕೆಯ 17 ಭಾಷೆಗಳಲ್ಲಿ ಮುದ್ರಿಸಲಾಗಿ ಮತ್ತು ವಿವಿಧ ಸೇವಾ ಕ್ಷೇತ್ರಗಳಿಗೆ ಕಳುಹಿಸಲಾಗುವುದು. |
| ಮೇ 23 | : ನಮ್ಮ ಪ್ರಾರ್ಥನೆ ಸಹಭಾಗಿಗಳಿಗಾಗಿ, ಚಂದಾದಾರರ ಸಹಭಾಗಿಗಳಿಗಾಗಿ, ನಂಬಿಕೆಯ ಸಹಭಾಗಿಗಳಿಗಾಗಿ, ಜೀವಂತ ಸಹಭಾಗಿಗಳಿಗಾಗಿ ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳಿಗಾಗಿ ಮತ್ತು ಅವರ ಕುಂಟುಬಗಳಿಗಾಗಿ ದೇವರಿಗೆ ಸ್ತೋತ್ರ. |
| ಮೇ 24 | : ನಮ್ಮ ಸಭೆಯ ಸಭಾ ಪಾಲಕರುಗಳಿಗಾಗಿ ಹಾಗು ಸಭೆಯ ಸಿಬ್ಬಂದಿ ವರ್ಗದವರಿಗಾಗಿ ನಾವು ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಮೇ 25 | : ಸುವಾರ್ತೆಯು ತಲುಪದ ಪ್ರದೇಶಗಳಲ್ಲಿ ಸುವಾರ್ತೆ ತಲುಪಲು ಆಶೀರ್ವದಿಸಿದ್ದಕ್ಕಾಗಿ ನಾವು ದೇವರನ್ನು ಸ್ತುತಿಸೋಣ. |
| ಮೇ 25 | : ನಮ್ಮ ಮುಖ್ಯಸಭೆಯ ಆರಾಧನೆಗಳು ಬೆಳಿಗ್ಗೆ 8:00 ರಿಂದ ರಾತ್ರಿ 8:00 ರವರೆಗೆ ಇರುತ್ತವೆ. ಅದಕ್ಕಾಗಿ ನಾವು ದೇವರನ್ನು ಸ್ತುತಿಸೋಣ. |
| ಮೇ 26 | : ಭಾನುವಾರದ ಆರಾಧನೆಯು ಬಾಲಾಜಿ ನಗರ, ಸಂತೋಷ್ ಪುರಮ್ ಮತ್ತು ವೆಲಿಚ್ಚೆರಿಯ ಆರಾಧನೆಗಳಿಗಾಗಿ ನಾವು ದೇವರನ್ನು ಸ್ತುತಿಸೋಣ. |
| ಮೇ 27 | : ನಮ್ಮ **ಸಂತ. ಪೌಲ ಶಾಲೆ**ಯ ಶಿಕ್ಷಕರಿಗಾಗಿ ಮತ್ತು ಸಿಬ್ಬಂದಿ ವರ್ಗದವರನ್ನು ದೇವರು ಆಶೀರ್ವದಿಸಿದ್ದಕ್ಕಾಗಿ ಪೂರ್ಣ ಹೃದಯದಿಂದ ಆತನಿಗೆ ಸ್ತೋತ್ರ. |
| ಮೇ 28 | : ನಮ್ಮ ಸಹಾಯಕರಿಗಾಗಿ ನಾವು ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಮೇ 29 | : ಕಳೆದ ತಿಂಗಳು ಪ್ರತಿಯೊಂದು ನಮ್ಮ ಸೇವೆಯ ಘಟನೆಗಳಿಗಾಗಿ ನಾವು ದೇವರಿಗೆ ಸ್ತೋತ್ರ ಸಲ್ಲಿಸೋಣ. |
| ಮೇ 30 | : ನಮ್ಮ ರಾಜ್ಯ ಸಂಯೋಜಕರು ಮತ್ತು ಅವರ ಕುಟುಂಬಗಳಿಗಾಗಿ ನಾವು ದೇವರಿಗೆ ಸ್ತೋತ್ರ ಸಲ್ಲಿಸುತ್ತೇವೆ. |
| ಜೂನ್ 01 | : ಹೊಸಬರಿಗೆ ಮತ್ತು ನಮ್ಮ ಸಭೆಯ ಎಲ್ಲಾ ವಿಶ್ವಾಸಿಗಳಿಗಾಗಿ ದೇವರಿಗೆ ಸ್ತೋತ್ರ. |
| ಜೂನ್ 02 | : ನಮ್ಮ ಮಿಶನರಿಗಳು ಮತ್ತು ಅವರ ಕುಟುಂಬಗಳನ್ನು ದೇವರು ಸಂರಕ್ಷಿಸಿದ್ದಕ್ಕಾಗಿ ನಾವು ದೇವರಿಗೆ ಸ್ತೋತ್ರ ಸಲ್ಲಿಸೋಣ. |

## ಪ್ರಾರ್ಥನೆಗಾಗಿ ಅಂಶಗಳು

| | |
|---|---|
| ಜೂನ್ 03 | : ನಮ್ಮ ಹಿರಿಯ ಸಭಾ ಪಾಲಕರಾದ ಪಾಸ್ಟರ್ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಕೆಟ್ಟ ಸನ್ನಿವೇಶಗಳಿಂದ ನಮ್ಮ ಕರ್ತನು ಸಂರಕ್ಷಿಸಿದ್ದಾನೆ. |
| ಜೂನ್ 04 | : ಪ್ರಪಂಚದ ಎಲ್ಲಾ ಕಡೆ ಶಾಂತಿಯು ನೆಲೆಸುವಂತೆ ಪ್ರಾರ್ಥಿಸಿರಿ. |
| ಜೂನ್ 05 | : ಈ ತಿಂಗಳ ಸೇವೆಯ ಎಲ್ಲಾ ಚಟುವಟಿಕೆಗಳಿಗಾಗಿ ಮತ್ತು ಉತ್ತಮ ಫಲಗಳಿಗಾಗಿ ಪ್ರಾರ್ಥಿಸಿರಿ. |
| ಜೂನ್ 06 | : ಆತನ **ಕರೆಯ ಪ್ರತಿಧ್ವನಿ**ಯ ಸೇವೆಗಳು ವಿಸ್ತರಿಸುವಂತೆ ಪ್ರಾರ್ಥಿಸಿರಿ. |
| ಜೂನ್ 07 | : ಎಲ್ಲಾ ದೇಶಗಳ ಜನರ ಸುರಕ್ಷತೆ ಮತ್ತು ಐಕ್ಯತೆಗಾಗಿ ಪ್ರಾರ್ಥಿಸಿರಿ. |
| ಜೂನ್ 08 | : **ಬೈಬಲ್ ಕೋರ್** ಮತ್ತು **ದೈವ ಶಾಸ್ತ್ರದ ಅಂಚೆ ತರಗತಿಗಳ ಕೋರ್ಸ್**ಗಾಗಿ ಪ್ರಾರ್ಥಿಸಿರಿ. |
| ಜೂನ್ 09 | : **ನೆಹಮೀಯ ಸತ್ಯವೇದ ಕಾಲೇಜ್ ಜೂನ್ 01, 2021** ರಂದು ಮರು ಆರಂಭವಾಗುತ್ತದೆ ಅದಕ್ಕಾಗಿ ಪ್ರಾರ್ಥಿಸಿರಿ. |
| ಜೂನ್ 10 | : ಎಲ್ಲ ಸಭೆಯ ವಿಶ್ವಾಸಿಗಳಿಗಾಗಿ ಮತ್ತು ವಿಶೇಷವಾಗಿ ನಮ್ಮ ಬಗ್ಗೆ ಕಾಳಜಿ ವಹಿಸುವರಿಗಾಗಿ ಪ್ರಾರ್ಥಿಸಿರಿ. |
| ಜೂನ್ 11 | : ಕೋವಿಡ್ - 19 ನಿಂದ ಕೆಟ್ಟದಾಗಿ ಪರಿಣಾಮ ಬೀರಿರುವ ಜನರಿಗಾಗಿ ಪ್ರಾರ್ಥಿಸಿರಿ. |
| ಜೂನ್ 12 | : ನಮ್ಮ ಸಹಾಯಕರಿಗಾಗಿ, ನಮ್ಮ ಸೇವೆಗಳಲ್ಲಿ ಪ್ರಾರ್ಥನೆಯಲ್ಲಿ ಹಿಡಿದಿಡುವ ಹಿತೈಷಿಗಳು ಮತ್ತು ಸ್ನೇಹಿತರಿಗಾಗಿ ಪ್ರಾರ್ಥಿಸಿರಿ. |
| ಜೂನ್ 13 | : ರಾಷ್ಟ್ರಪತಿಗಳಿಗಾಗಿ, ಪ್ರಧಾನ ಮಂತ್ರಿಗಳಿಗಾಗಿ, ಪ್ರಪಂಚದ ಎಲ್ಲಾ ಆಡಳಿತ ವರ್ಗದ ಅಧಿಕಾರಿಗಳಿಗಾಗಿ ಪ್ರಾರ್ಥಿಸಿರಿ. |
| ಜೂನ್ 14 | : ನಮ್ಮ ಸಹಾಯಕ ಸಂಪಾದಕರಾದ ಘನ. ಶಶಿ ತಿವಾರಿ ಮತ್ತು ಘನ. ರಾಮಕೃಷ್ಣರವರ ಶೀಘ್ರ ಚೇತರಿಕೆಗಾಗಿ ಪ್ರಾರ್ಥಿಸಿರಿ. |
| ಜೂನ್ 15 | : ನಮ್ಮ ಆಂಗ್ಲ ಭಾಷೆಯ ಸಹ ಸಂಪಾದಕರಾದ ಸಹೋದರ ಎಂ. ಪಾಲ್‌ರಾಜ್ ರವರ ಸಂಪೂರ್ಣ ಸ್ವಸ್ಥತೆ ಮತ್ತು ಸಮಾಧಾನದ ಜೀವಿತಕ್ಕಾಗಿ ಪ್ರಾರ್ಥಿಸಿರಿ. |
| ಜೂನ್ 16 | : ಮಣಿಪುರಿ ಭಾಷೆಯ ಸಹ ಸಂಪಾದಕರಾದ ರೆವ. ಡಾ. ರಿಸಿಕಾಂತ ಸೊರಾಕೈಬಾಮ್‌ರವರು ಅನಾರೋಗ್ಯದಲ್ಲಿದ್ದಾರೆ ಅವರಿಗಾಗಿ ಪ್ರಾರ್ಥಿಸಿರಿ. |
| ಜೂನ್ 17 | : ಪ್ರಪಂಚದ ಎಲ್ಲಾ ದೇಶಗಳಲ್ಲಿ ಕೊರೋನಾ ವೈರಸ್ ಸಂಪೂರ್ಣವಾಗಿ ಬಹಳ ಬೇಗನೆ ನಿರ್ಮೂಲವಾಗುವಂತೆ ಪ್ರಾರ್ಥಿಸಿರಿ. |
| ಜೂನ್ 18 | : ದೇವರು ನಿರಂತರವಾಗಿ ನಮ್ಮ ಹಿರಿಯ ಸಭಾ ಪಾಲಕರಾದ ಪಾಸ್ಟರ್ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಕೆಟ್ಟ ಸನ್ನಿವೇಶಗಳಿಂದ ಕರ್ತನು ಸಂರಕ್ಷಿಸುವಂತೆ ಪ್ರಾರ್ಥಿಸಿರಿ. |

ದೇವರ ಮತ್ತು ಮನುಷ್ಯರ ದಯೆಗೆ ಪಾತ್ರನಾದನು. ದೇವರು ಈ ಇಬ್ಬರನ್ನು ನೋಡುತ್ತಾನೆ. ಯಾರನ್ನು ಆಶೀರ್ವದಿಸುತ್ತಾನೆ? ಯಾರನ್ನು ಮೇಲೆತ್ತುತ್ತಾನೆ? ಯಾರನ್ನು ಆತನು ನಂಬುತ್ತಾನೆ?

ನಾನು ಯೌವ್ವ ನಸ್ಥನಿರುವಾಗ, ನನ್ನ ಹೆತ್ತವರು ನನ್ನನ್ನು **ಪಾಸ್ಟರ್. ದೇವ ದಾಸನ್** ಅವರಿಗೆ ಒಪ್ಪಿಸಿದರು (ಮಾಜಿ ಸಂಪಾದಕರು ಆತನ ಬರುವಿಕೆಯ ಬಗ್ಗೆ ಭಾರತ ಹೆರಾಲ್ಡ್). ದೇವರ ಸೇವಕರಿಗೆ ಸೇವೆಯನ್ನು ಮಾಡುವ ಸೌಭಾಗ್ಯವು ನನಗೆ ದೊರೆಯಿತು. ನಾನು ಆತನಿಗೆ ಸತ್ಯವಾಗಿದ್ದೆನು. ಆತನು ಎಲ್ಲದರಲ್ಲಿಯೂ ಸಂಪೂರ್ಣವಾಗಿದ್ದನು ಮತ್ತು ಸಮಯವನ್ನು ಪರಿಪಾಲಿಸುವನಾಗಿದ್ದನು. ನಾನು ಆತನನ್ನು ಎಲ್ಲಾ ರೀತಿಯಲ್ಲಿಯೂ ಮೆಚ್ಚಿಸ ಬೇಕು ಮತ್ತು ಆತನಿಗೆ ಇಷ್ಟವಾಗದ ಯಾವುದನ್ನೂ ಎಂದಿಗೂ ಮಾಡಬಾರದು ಎಂಬುದನ್ನು ನಾನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡು ನನ್ನ ಸೇವೆಗಳನ್ನು ನೀಡುತ್ತಿದ್ದೇನು.



ನನ್ನ ಸಭಾ ಪಾಲಕರು ಗಂಟೆಗಟ್ಟಲೆ ತಮ್ಮ ಮೊಣಕಾಲಿನಲ್ಲಿ ಪ್ರಪಂಚದ ಎಲ್ಲಾ ಜನರಿಗೋಸ್ಕರವಾಗಿ ಪ್ರಾರ್ಥಿಸುತ್ತಿದ್ದರು. ಆ ವಿನ್ಯಾಸವನ್ನು ನೋಡಿದ ನಾನು, ಆತನ ಹಾಗೆ ನಾನು ಪ್ರಾರ್ಥಿಸುವುದಕ್ಕೆ ಕಲಿತೆನು. ನಾನು ದೇವರ ವಾಕ್ಯವನ್ನು ಗಂಟೆಗಟ್ಟಲೆ ಓದಲು ಮತ್ತು ಮೊಣಕಾಲುಗಳ ಮೇಲೆ ನಿಂತು ವಚನವನ್ನು ಧ್ಯಾನಿಸಲು ಕಲಿತಿದ್ದೇನೆ. ಅನೇಕ ವಿಷಯಗಳನ್ನು ಅವರಿಂದ ನಾನು ಕಲಿತಿದ್ದೇನೆ. ದೇವರ ಸಂದೇಶವನ್ನು ಸ್ವಂತ ದೇವರಿಂದ ಸ್ವೀಕರಿಸುವುದು. ದೇವರ ವಾಕ್ಯದ ಅನುಸಾರವಾಗಿ ನಡೆಯುವುದು, ಆಲೋಚನೆಗಳನ್ನು ಬರೆದಿಟ್ಟುಕೊಳ್ಳುವುದು ಮತ್ತು ಅವುಗಳನ್ನು ಮುದ್ರಿಸುವುದು. ದೇವರ ವಾಕ್ಯವನ್ನು ಬೋಧಿಸುವುದು, ನನಗೆ ಬರುವ ಆದಾಯದಲ್ಲಿ ದಶಮಾಂಶವನ್ನು ತೆಗೆಯುವುದು ಮತ್ತು ದೇವರಿಗೆ ದಶಮಾಂಶವನ್ನು ಕೊಡುವುದು. ವಿಶೇಷ ಕಾಣಿಕೆಗಳಿಂದ ಬೇರೆ ಸೇವೆಗಳಿಗೆ ಸಹಾಯ ಮಾಡುವುದು. ನನ್ನನ್ನು ನೋಡಲು ಬರುವ ದೇವ ಸೇವಕರುಗಳಿಗೆ ಪ್ರೀತಿಯಿಂದ ಕಾಣಿಕೆಯನ್ನು ಕೊಡುವುದು. ಸ್ವಚ್ಛವಾದ ಬಟ್ಟೆಗಳನ್ನು ಹಾಕಿಕೊಳ್ಳುವುದು ಮುಂತಾದವುಗಳು. ಅಂತಹ ಎಲ್ಲ ಒಳ್ಳೆಯ ವಿಷಯಗಳನ್ನು ನಾನು ಅವರಿಂದ ಕಲಿತಿದ್ದೇನೆ ಮತ್ತು ನನ್ನ ದೇವರನ್ನು ಮೆಚ್ಚಿಸಿದ್ದೇನೆ. ನನ್ನ ಸಭಾ ಪಾಲಕರು ಮತ್ತು ಆತನ ದೊಡ್ಡ ಕುಟುಂಬದ ಎಲ್ಲಾ ಸದಸ್ಯರುಗಳು ಮತ್ತು ಅವರ ಹೆಂಡತಿಯನ್ನು ಒಳಗೊಂಡು ಮಕ್ಕಳಾದ ಡಾ. ಡಿ. ಟಿ. ರಾಜ, ಡಾ. ಡಿ. ಎಸ್. ಸ್ಪರ್ಜನ್, ಸಹೋ. ಥಿಯೊಡರ್, ಸಹೋ. ವೆಸ್ಲಿ ದೇವದಾಸನ್, ಹೆಣ್ಣು ಮಕ್ಕಳು ಮತ್ತು ಮೊಮ್ಮಕ್ಕಳು. ಅವರು ಕೂಡ ನನ್ನನ್ನು ಬಹಳ ಪ್ರೀತಿ ಮಾಡಿದರು. ನಂತರ ದಿನಗಳಲ್ಲಿ ದೇವರು ನನಗೆ ಹೆಚ್ಚು ಹೆಚ್ಚು ಆಶೀರ್ವಾದದಿಂದ ಪ್ರತಿಫಲ ನೀಡಿದ್ದಾನೆ.

ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ. ನಿನ್ನ ಆಜ್ಞೆಗಳ ಮೂಲಕ ನನ್ನ ವೈರಿಗಳಿಗಿಂತ ಬುದ್ಧಿವಂತನಾಗಿದ್ದೇನೆ; ಸದಾಕಾಲವೂ ಅವೇ ನನಗಿವೆ. ನಿನ್ನ ಕಟ್ಟಳೆಗಳು ನನ್ನ ಧ್ಯಾನವಾಗಿರುವುದರಿಂದ ನನ್ನ ಉಪಾಧ್ಯಾಯರಿಗಿಂತ ಜ್ಞಾನಿಯಾಗಿದ್ದೇನೆ. ನಿನ್ನ ನೇಮಗಳನ್ನು ಕೈಕೊಂಡಿರುವುದರಿಂದ ಹಿರಿಯರಿಗಿಂತ ವಿವೇಕಿಯಾಗಿದ್ದೇನೆ (ಕೀರ್ತನೆ 119:97-100). ನನ್ನ ಜೀವನದಲ್ಲಿ ದೇವರು ನನ್ನೊಂದಿಗೆ ಏನು ಹೇಳಿದ್ದನು ಅದು ನೆಲದ ಮೇಲೆ ಬಿದ್ದಿಲ್ಲ. ಆತನು ನನ್ನನ್ನು ರಕ್ಷಿಸುತ್ತಾನೆ. ಆತನು ನನ್ನ ಅಗತ್ಯತೆಗಳನ್ನು ಪೂರೈಸುತ್ತಾನೆ. ಆಮೆನ್.

ಪ್ರೀತಿಯ ಯೌವ್ವವಾವಸ್ಥ ಹುಡುಗ ಹುಡುಗಿಯರ ನೀವು ಈ ಲೋಕದ ರೀತಿಯಲ್ಲಿ ಜೀವಿಸುತ್ತಾ ಇದ್ದೀರಾ? ನಿಮಗೆ ಮೇಲಿನ ತರಹದ ಅನುಭವ ಇದೆಯಾ? ಇತರರನ್ನು ಆಕರ್ಷಿಸುವ ಸಲುವಾಗಿ ನೀವು ಧರಿಸುವಿರಾ? ನಿಮ್ಮ ಕೇಶ ಶೈಲಿಯು ಇತರರನ್ನು ಆಕರ್ಷಿಸುತ್ತಿದ್ದೀಯಾ? ನಿಮ್ಮನ್ನು ನೀವು ನೋಡಿಕೊಳ್ಳಿರಿ. ಮೋಸ ಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ (ಗಲಾತ್ಯ 6:7).

ದೇವರ ಸೇವಕರೆಂದು ಹೆಮ್ಮೆಪಡುವ ಇಂದಿನ ಕೆಲವು ಯುವಕ - ಯುವತಿಯರನ್ನು ನೋಡಿ. ಅವರ ಉಡುಪಿನ ಶೈಲಿಯನ್ನು ನೋಡಿರಿ. ಅವರ ಕೇಶಶೈಲಿ, ಅವರ ಮಿಶೆಗಳು ಮತ್ತು ಗಡ್ಡಗಳು, ಅವರು ಲೌಕಿಕದಿಂದ, ಆದರೆ ತಪ್ಪಾದ ವಸ್ತ್ರದ ಶೈಲಿ. ನಾವು ಬೇರೆಯವರನ್ನು ಆಕರ್ಷಿಸಬಹುದೆಂದು ಅವರು ಆಲೋಚನೆ ಮಾಡುತ್ತಾರೆ. ಅವರು ತಮ್ಮಂತೆ ಧರಿಸುವ ಯುವಕ-ಯುವತಿಯರ ಕೆಲವು ಗುಂಪುಗಳನ್ನು ಆಕರ್ಷಿಸಬಹುದು. ಆದರೆ ಅವರು ಮಾರ್ಡನ್ ಸೇವೆಗಳು, ಅವರು ದೇವರನ್ನು ಎಂದಿಗೂ ಮೆಚ್ಚಿಸುವುದಿಲ್ಲ ಹಾಗು ಪಾಪದಲ್ಲಿ ಜೀವಿಸುವ ಒಬ್ಬ ವ್ಯಕ್ತಿಯನ್ನು ಕೂಡ ಬಿಡುಗಡೆ ಮಾಡಲಿಕ್ಕೆ ಆಗುವುದಿಲ್ಲ. ಎಚ್ಚರವಾಗಿರಿ! ಸಮುವೇಲನ ನಮ್ರತೆ ಮತ್ತು ನಂಬಿಕೆಯು ಅವನ ಯೌವ್ವನದಲ್ಲಿ ದೇವರು ಮತ್ತು ಮನುಷ್ಯರನ್ನು ಮೆಚ್ಚಿಸಿದನು, ಅವನಿಗೆ ದೇವರು ಹೇಳಿದ ಮಾತುಗಳು ಯಾವುವು ನೆಲಕ್ಕೆ ಬೀಳಲಿಲ್ಲ.

ಪ್ರೀತಿಯ ದೇವ ಮಗುವೇ, ನಿಮಗೆ ಈ ಅನುಭವ ಇದೆಯಾ? ದೇವರ ಸೇವೆಗೆ ದೇವರ ಕರೆಯುವಿಕೆಯಿಂದ ಕೆಲವು ಯುವಕರು ತಮ್ಮ ಆರಂಭಿಕ ಹಂತದಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತಾರೆ. ಆದರೆ ಅವರು ಬಹಳ ಕಾಲ ನಿಲ್ಲುವುದಿಲ್ಲ. ಮದುವೆಯಾದ ಮೇಲೆ ಅನೇಕ ಜನರು ಸಂಪೂರ್ಣವಾಗಿ ಬದಲಾಗುತ್ತಾರೆ. ಅವರು ತಮ್ಮ ಉಡುಪಿನ ಶೈಲಿಯನ್ನು ಬದಲಾಯಿಸುತ್ತಾರೆ, ಅವರು ನಂಬಿದ ಸಿದ್ಧಾಂತವನ್ನು ಬದಲಾವಣೆ ಮಾಡಿಕೊಳ್ಳುತ್ತಾರೆ. ಅವರು ಒಂದು ದಿನ ದೇವರಿಂದ ಪಡೆದ ಕರೆಯುವಿಕೆಯನ್ನು ಮರೆತುಬಿಡುತ್ತಾರೆ. ಅವರು ಆತ್ಮೀಕ ಮಾನದಂಡಗಳನ್ನು ಕಳೆದುಕೊಳ್ಳುತ್ತಾರೆ ಮತ್ತು ದುರಸ್ತಿಯಾಗದ ಹಾಗೆ ಮುರಿದು ಹೋಗುತ್ತಾರೆ. ನಾವು ಸಮಾಜದಲ್ಲಿ ತುಂಬಾ ಎತ್ತರಕ್ಕೆ ಏರಬಹುದು. ಆದರೆ ನಾವು ಧರ್ಮಪ್ರಚಾರಕ ಬೋಧನೆಗಳನ್ನು ಅನುಸರಿಸಲು ಜಾಗರೂಕರಾಗಿರಬೇಕು ಮತ್ತು ಸಮಕಾಲೀನ ಪೀಳಿಗೆಗೆ ಪ್ರಾಚೀನ ಮತ್ತು ಆರಂಭಿಕ ಅಪೋಸ್ತಲರ ಬೋಧನೆಗಳನ್ನು ವಿವರಿಸಬೇಕು ಮತ್ತು ಕಲಿಸಬೇಕು. ಈ ಬೋಧನೆಗಳಿಗೆ ವಿವಾಹವಾದ ದೇವರ ಸೇವಕರು ದೀರ್ಘಕಾಲ ದೇವರಿಗೆ ಸೇವೆ ಸಲ್ಲಿಸಬಹುದು ಮತ್ತು ಆಶೀರ್ವದಿಸಿದ ಜೀವನವನ್ನು ನಡೆಸಬಹುದು. ಇಂತವರಿಗೆ ಜಯವು ನಿಶ್ಚಯವಾಗಿರುತ್ತದೆ. ನಮ್ಮ ಕರ್ತನಾದ ದೇವರಿಗೆ ಇಂತಹ ವ್ಯಕ್ತಿಗಳು ಬೇಕಾಗಿದ್ದಾರೆ!

**ಮೂರನೆಯದಾಗಿ, ಸಮುವೇಲನು ದೊಡ್ಡವ ನಾಗುತ್ತಾ ಬಂದನಷ್ಟೇ ಯೆಹೋವನು ಅವನೊಡನೇ... (1 ಸಮುವೇಲ 3:19).**

ದೇವರ ನಾಮಕ್ಕೆ ಸ್ತೋತ್ರವಾಗಲಿ! ಸಮುವೇಲನು ಈಗ ದೊಡ್ಡವನಾಗಿ ಬೆಳೆದಿದ್ದಾನೆ, ಹಾಗೆ ಕರ್ತನಾದ ದೇವರು ಅವನ ಸಂಗಡ ಇದ್ದನು. ಬಾಲ್ಯ ಮತ್ತು ಯೌವ್ವನಸ್ಥ, ಪ್ರೌಢಾವಸ್ಥೆಯಿಂದ ಭಿನ್ನರಾಗಿದ್ದಾರೆ. ನೀನು ಮಗು ಅಥವಾ ಯೌವ್ವನಸ್ಥರಾಗಿದ್ದಾಗ, ನಿನಗೆ ನಿನ್ನ ಪೋಷಕರಿಂದ ಮತ್ತು ಸಮಾಜದಿಂದ ಸಹಾಯ ಸಿಗುತ್ತದೆ. ನೀನು ದೊಡ್ಡವನಾದಾಗ ನಿನಗೆ ಹೆಚ್ಚು ದೇವರ ಕೃಪೆ ಬೇಕಾಗಿದೆ. ಮದುವೆ, ಮಕ್ಕಳು, ಹಣಕಾಸು, ಸಾಮಾಜಿಕ ಜೀವನ, ಅನಾರೋಗ್ಯ ಮತ್ತು ಕುಟುಂಬ ಸಮಸ್ಯೆಗಳಂತಹ ವಿವಿಧ ಸಂದರ್ಭಗಳಲ್ಲಿ ನೀವು ನಿಮ್ಮನ್ನು ತೊಡಗಿಸಿಕೊಳ್ಳುತ್ತೀರಿ. ಇಂತಹ ಪರಿಸ್ಥಿತಿಗಳಲ್ಲಿ, ನಿಮಗೆ ದೇವರ ಸಹಾಯ ಬೇಕಾಗಿದೆ. ನಾವು ಒಬ್ಬರೇ ನಿಂತುಕೊಳ್ಳಲಿಕ್ಕೆ ಆಗುವುದಿಲ್ಲ ಮತ್ತು ದೈವಿಕ ಕರುಣೆಯಿಲ್ಲದೆ ವಿಜಯಶಾಲಿ ಜೀವನ ಆಗುವುದಿಲ್ಲ. ರಕ್ಷಣೆ ಮತ್ತು ಮಾರ್ಗದರ್ಶನದಂತಹ ದೇವರ ಸಹಾಯ ಖಂಡಿತವಾಗಿಯೂ ಅಗತ್ಯವಾಗಿರುತ್ತದೆ.

ನಾನು ಸಂಪೂರ್ಣ ಸೇವೆಗೆ ಬರುವುದಕ್ಕಿಂತ ಮುಂಚೆ ನಾನು ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನು. ನನ್ನ ಕಛೇರಿಯಲ್ಲಿ ಒಬ್ಬ ಗೆಳೆಯ

ನಿದ್ದನು. ನನ್ನ ಊಟದ ಸಮಯದಲ್ಲಿ ನಾನು ಕರಪತ್ರಗಳನ್ನು ಹಂಚಿ ಮತ್ತು ಭೋದಿಸುತ್ತಿದ್ದೇನು. ನಾನು ಪ್ರತ್ಯೇಕ ಜೀವಿತವನ್ನು ಜೀವಿಸುತ್ತಿದ್ದೇನು. ಇಂತಹ ಸಂಗತಿಗಳಲ್ಲಿ ನಾನು ಒಳಗೊಂಡಿರುವುದನ್ನು ನೋಡಿ ನನ್ನ ಗೆಳೆಯನು ನನ್ನನ್ನು ಕೀಟಲೆ ಮಾಡುವುದು ಮತ್ತು ಉನ್ನತ ಅಧಿಕಾರಿಗಳಿಗೆ ನನ್ನ ಬಗ್ಗೆ ದೂರು ನೀಡಿದನು. ಆತನು ನನಗೆ ಮಾನಸಿಕ ಹಿಂಸೆಯನ್ನು ಕೊಟ್ಟನು. ನಾನು ಆತನಿಗಾಗಿ ಪ್ರಾರ್ಥಿಸುತ್ತಿದ್ದೇನು. ಅನೇಕ ವರ್ಷಗಳ ನಂತರ ಆತನನ್ನು ನಾನು ಭೇಟಿಯಾದಾಗ, ಆತನ ಕೇಶ ಶೈಲಿಯನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು ಮತ್ತು ಆತನ ನಡವಳಿಕೆಯು ಸಂಪೂರ್ಣವಾಗಿ ಬದಲಾವಣೆಯಾಗಿತ್ತು. ಯೇಸು ಜೀವಿಸುತ್ತಾನೆ ಎಂದು ತನ್ನ ಅಂಗಿಯ ಮುಂಭಾಗದ ಭಾಗದಲ್ಲಿ ಬ್ಯಾಡ್ಜ್ ಮತ್ತು ಆತನ ಕೈಯಲ್ಲಿ ಪವಿತ್ರ ಸತ್ಯವೇದ ಇರುವುದನ್ನು ನಾನು ಗಮನಿಸಿದೆನು. ಆತನು ಬಹಳ ವ್ಯತ್ಯಾಸವಾದ ಮನುಷ್ಯನಾಗಿ ಕಂಡನು!

ನಾನು ಆತನನ್ನು ಬಹಳ ಆಶ್ಚರ್ಯದಿಂದ ಕೇಳಿದೆನು, ಪ್ರಿಯ ಗೆಳೆಯನೆ, ನಿನಗೆ ಏನಾಯಿತು? ನೀನು ನನಗಿಂತ ವೇಗವಾಗಿ ಹೋಗುವಂತೆ ಕಾಣುತ್ತದೆ. ಆತನು ನನಗೆ ಸಹೋ. ಸ್ಯಾಮ್, ನನಗೆ ಮದುವೆಯಾಗಿದೆ, ಆದರೆ ನನಗೆ ಒಳ್ಳೆಯ ಕೆಲಸವಿಲ್ಲವೆಂದು ಉತ್ತರ ಕೊಟ್ಟನು. ನನ್ನ ಮನೆಯಲ್ಲಿ ಶಾಂತಿಯಿಲ್ಲ, ನಮಗೆ ಹಣದ ಕೊರತೆಯಿದೆ, ಇನ್ನೂ ನಮಗೆ ಮಕ್ಕಳು ಆಗಲಿಲ್ಲ. ಪ್ರತಿಯೊಬ್ಬರ ನಮ್ಮನ್ನು ನೋಡಿ ಕೀಟಲೆ ಮಾಡುತ್ತಾರೆ. ನಾನು ಹೇಗಾದರೂ ಮಾಡಿ ನಾನು ಇದರಿಂದ ಬಿಡುಗಡೆಯಾಗಬೇಕು. ಆದರೆ ಈ ನಿರೀಕ್ಷೆಯಿಲ್ಲದೆ ಇಲ್ಲದ ಜೀವತವನ್ನು ನನ್ನನ್ನು ಬಿಡುಗಡೆ ಮಾಡಲಿಕ್ಕೆ ಯಾರು ಬರಲಿಲ್ಲ, ನಿದ್ದೆ ಇಲ್ಲದ ರಾತ್ರಿಗಳು ಮತ್ತು ಪಾಪಗಳು ನನ್ನ ಜೀವಿತದಲ್ಲಿ. ನನ್ನ ಸಮಸ್ಯೆಗಳನ್ನು ಪರಿಹರಿಸಲು ನಿಜವಾಗಿಯೂ ನನ್ನೊಂದಿಗೆ ಇರಬಹುದಾದ ಸರ್ವೋಚ್ಚ ದೇವರ ಸಹಾಯ ನನಗೆ ಬೇಕಾಗಿತ್ತು.

ಈ ಪರಿಸ್ಥಿತಿಯಲ್ಲಿ ನಾನು ನೆರೆಹೊರೆಯವನನ್ನು ಹೊಂದಿದ್ದೇನೆ, ಅವನು ಯಾವಾಗಲೂ ಯೇಸು ಕ್ರಿಸ್ತನ ಹೆಸರಿನಿಂದ ಯಾರನ್ನಾದರೂ ಹಾಡುತ್ತಿದ್ದನು ಮತ್ತು ಕೂಗುತ್ತಿದ್ದನು ಅತನ ದೊಡ್ಡ ಸ್ಪೀಕರ್‌ದಿಂದ. ನನಗೆ ಗೊತ್ತಾಲಿಲ್ಲ ನಾನು ಏನು ಮಾಡಬೇಕೆಂದು. ಒಂದು ದಿವಸ ಯಾರು ಗಮನಿಸದ ಹಾಗೆ ನಾನು ಚಿಕ್ಕ ಸಭೆಗೆ ಪ್ರಾರ್ಥನೆ ಮಾಡುವ ಸಮಯದಲ್ಲಿ ಒಳಗೆ ಹೋಗಿ ಒಂದು ಮೂಲೆಯಲ್ಲಿ ಕೂತುಕೊಂಡೆನು. ಆ ಸಭಾಪಾಲಕರಿಗೆ ನನಗೆ ಬಗ್ಗೆ ಗೊತ್ತಿರಲಿಲ್ಲ ಅಥವಾ ನನ್ನನ್ನು ಗಮನಿಸಲಿಲ್ಲ. ನಾನು ಯಾರಿಗೂ ಗೊತ್ತಿರಲಿಲ್ಲ, ಯಾರಿಗೂ ನನ್ನ ಅಗತ್ಯತೆಗಳು ಗೊತ್ತಿರಲಿಲ್ಲ, ನನ್ನ ಮುರಿಯುವಿಕೆಯು.

ಆತನು ಸತ್ಯವೇದದ ಮತ್ತಾಯ 11:28 ನ್ನು ವಿವರಿಸಿದನು **ಎಲ್ಲೈ ಕಷ್ಟ ಪಡುವವರೇ, ಹೊರೆ ಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು.** ಈ ಪ್ರತಿ ಯೊಂದು ಪದಗಳು ನನ್ನ ಹೃದಯಕ್ಕೆ ತೂರಿಕೊಂಡು ಕೆಲವು ರೀತಿಯ ಕಂಪನವನ್ನು ಸೃಷ್ಟಿಸಿದವು. ನನ್ನ ಜ್ಞಾನ ಮತ್ತು ನಂಬಿಕೆಯನ್ನು ಮೀರಿ ಸೂಪರ್ ನೈಸರ್ಗಿಕ ದೈವಿಕ ಸ್ಪರ್ಶವನ್ನು ಆನಂದಿಸಲು ನನಗೆ ಸಾಧ್ಯವಾಯಿತು.

ಆ ದಿನವು ನನಗೆ ಗೊತ್ತಾಯಿತು ದೇವರು ಇದ್ದಾನೆ, ಆತನ ಹೆಸರು ಯೇಸು ಕ್ರಿಸ್ತನು ಎಂದು. ಎಂತಹ ಅದ್ಭುತವಾದ ಅನುಭವ! ಅದೇ ದಿವಸ ನಾನು ನನ್ನ ಪಾಪಗಳನ್ನು ಬಾಯಿಂದ ಕರ್ತನಾದ ಯೇಸು ಕ್ರಿಸ್ತನಿಗೆ ಅರಿಕೆ ಮಾಡಿದೆನು, ನಾನು ಪಾಪ ಕ್ಷಮಾಪನೆಯನ್ನು ಸ್ವೀಕರಿಸಿದೆನು ಮತ್ತು ನಾನು ವ್ಯತ್ಯಾಸವಾದ ಹೃದಯವನ್ನು ಹೊಂದಿದ್ದೇನೆ. ಸಹೋ. ಸ್ಯಾಮ್. ನಾನು ರಕ್ಷಣೆಯ ಅನುಭವವನ್ನು ಹೊಂದಿದ್ದೇನೆ ಮತ್ತು ನನ್ನ ಕುಟುಂಬವು ಕೂಡ ರಕ್ಷಣೆ ಹೊಂದಿದೆ. ನಾವು ಈಗ ಪರಿಶುದ್ದಾತ್ಮನ ದೇವರಿಂದ ನಡೆಸಲ್ಪಡುತ್ತಿದ್ದೇವೆ. ನನ್ನ ರಕ್ಷಕನಾದ ಯೇಸು ಕ್ರಿಸ್ತನು ನನ್ನ ಮುರಿದು ಹೋಗುವಿಕೆಯನ್ನು ತೆಗೆದು ಹಾಕಿದನು ಮತ್ತು ನನ್ನ ಅಗತ್ಯತೆಗಳನ್ನು ಪೂರೈಸಿದ್ದಾನೆ.

ಪ್ರಿಯ ಓದುಗರೇ, ಈ ಹೊತ್ತು ನಿಮಗೆ ರಕ್ಷಕನು ಬೇಕಾಗಿದೆ! ನಿಮಗೆ ದೇವರು ಬೇಕಾಗಿದೆ! ಕ್ರೈಸ್ತರ ಬೋಧನೆಯ ಬಗ್ಗೆ ಏನಾದರೂ ತಪ್ಪು ಹೇಳುವ ಜನರಿಗೆ ಅಂಟಿಕೊಳ್ಳಬೇಡಿ ಅಥವಾ ಕೇಳಬೇಡಿ! ಬಹಳ ಶಕ್ತಿಯುಳ್ಳ ಸೃಷ್ಟಿಕರ್ತನು ಮತ್ತು ದೇವರು ಹೇಳುತ್ತಾನೆ, ದುರ್ಮತಿಗಳು ದೇವರಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ; ಅವರು ಕೆಟ್ಟು ಹೋದವರು; ಹೇಯ ಕೃತ್ಯಗಳನ್ನು ನಡೆಸುತ್ತಾರೆ; ಅವರಲ್ಲಿ ಒಳ್ಳೆಯದನ್ನು ಮಾಡುವವರೇ ಇಲ್ಲ (ಕೀರ್ತನೆ 53:1). ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ, ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ (1 ಕೊರಿಂಥ 1:18). ನೀವು ಸಫಲವಾಗುವುದಕ್ಕೆ ಹುಟ್ಟಿದ್ದೀರಿ.

ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ (ಯೆಶಾಯ 60:1).

ಸಮುವೇಲನು ದೇವರನ್ನು ಯಾವಾಗಲೂ ಅವನೊಂದಿಗೆ ಇಟ್ಟುಕೊಂಡು ಬೆಳೆದ. ಆದುದರಿಂದ ಆತನಿಗೆ ದೇವರು ಏನನ್ನು ಹೇಳಿದ್ದನೋ ಅವು ಎಂದಿಗೂ ನೆಲಕ್ಕೆ ಬೀಳಲಿಲ್ಲ. ಪ್ರಿಯ ಗೆಳೆಯನೇ, ನೀನು ಚಿಕ್ಕ ಮಗುವಾಗಿರಬಹುದು, ಯೌವ್ವನಸ್ಥ ಪ್ರೌಢನಾಗಿರಬಹುದು ಮತ್ತು ನಿಮಗೆ ವಯಸ್ಸಾಗಿರಬಹುದು. ಆದರೆ ದೇವರ ಶಕ್ತಿಯು ಎಂದಿಗೂ ಕಡಿಮೆಯಾಗುವುದಿಲ್ಲ! ಈಗ ಆತನ ಬಳಿಗೆ ಬನ್ನಿರಿ, ವಿಜಯವು ನಿಶ್ಚಯವಾಗಿದೆ!

## ನಾಲ್ಕನೆಯದು, ವೃದ್ಧನಾದ ಸಮುವೇಲನು



ಯೆಹೋವನು ಅವನನ್ನು ತನ್ನ ಪ್ರವಾದಿಯನ್ನಾಗಿ ನೇಮಿಸಿಕೊಂಡದ್ದು ದಾನ್ ಊರಿನಿಂದ ಬೇರ್ಷೆಬಂದವರೆಗಿದ್ದ ಎಲ್ಲಾ ಇಸ್ರಾಯೇಲ್ಯರಿಗೆ ಗೊತ್ತಾಯಿತು (1 ಸಮುವೇಲ 3:20).

ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯವನ್ನು ಸಾಧಿಸುವನು (1 ಥೆಸಲೋನಿಕ 5:24).

**ಈಗ ಸಮುವೇಲನು ಪ್ರವಾದಿ ಮತ್ತು ಎಲ್ಲಾ ಇಸ್ರಾಯೇಲ್ಯರಿಗೆ ನ್ಯಾಯಾಧೀಶನಾದನು. ಆತನು ದೇವರಿಂದ ಕರೆಯಲ್ಪಟ್ಟ ಪ್ರವಾದಿಯಾದನು (1 ಸಮುವೇಲ 3:20). ನಂತರ ಸಮವೇಲನು ರಾಮದಲ್ಲಿ ಉಳಿದು ಮಿಸ್ಪಾ, ಗಿಲ್ಗಾಲ್ ಮತ್ತು ಬೇತೆಲ್‌ಲ್ಲಿ ನ್ಯಾಯಾಧೀಶನ ಪಾತ್ರವನ್ನು ನಿರ್ವಹಿಸಿದನು. ಆತನು ಪ್ರವಾದಿ ಮತ್ತು ನ್ಯಾಯಾಧೀಶನಾಗಿದ್ದನು.** ಆತನ ಎರಡು ಮಕ್ಕಳು ತನ್ನ ವೃದ್ಯಾಪದಲ್ಲಿ ಆತನಿಗೆ ಸಹಾಯ ಮಾಡಿದರು. ಎಂತಹ ಅದ್ಭುತ ಮತ್ತು ಆಶೀರ್ವದಿಸಲ್ಪಟ್ಟ ಮನುಷ್ಯನಾದ ಸಮುವೇಲನು!

ನಂತರ ಇಸ್ರಾಯೇಲ್ಯ ಜನರು ತಮ್ಮನ್ನು ಆಳುವದಕ್ಕೆ ಒಬ್ಬ ಅರಸನು ಬೇಕೆಂದು ಬೇಡಿಕೆ ಇಟ್ಟರು. ಆದುದರಿಂದ, ದೇವರ ಆಜ್ಞೆಯಾನು

ಸಾರವಾಗಿ, ನ್ಯಾಯಾಧೀಶ, ಆತನು ಸೌಲನನು ಅರಸನಾಗಿ ಅಭಿಷೇಕಿಸಿದನು. ಆತನು ತನ್ನ ಜೀವನದ ಕೊನೆಯವರೆಗೂ ಪ್ರವಾದಿ ಮತ್ತು ನ್ಯಾಯಾಧೀಶನಾಗಿ ಮುಂದುವರೆದನು. ನಾನು ವೈಯಕ್ತಿವಾಗಿ ಸಮುವೇಲನನ್ನು ಬಹಳವಾಗಿ ಹೊಗಳುತ್ತೇನೆ.

## ಒಂದು ಅನುಭವ!

ನಾನು ಸರ್ಕಾರಕ್ಕಾಗಿ ಕೆಲಸ ಮಾಡುತ್ತಿರುವಾಗ, ಕಛೇರಿಯ ಕಾರ್ಯ ನಿರ್ವಹಣೆಗೆ ಹೊಸ ಕಟ್ಟಡವನ್ನು ನಿರ್ಮಿಸಲಾಯಿತು. ಯಾವಾಗ ಕಟ್ಟಡದ ಕೆಲಸ ಮುಗಿಯಿತೋ, ಕಛೇರಿಯು ಸ್ಥಳಾಂತರಿಸುವ ಮೊದಲು, ಕಛೇರಿಯು ಸಿಬ್ಬಂದಿಯು ವಿಗ್ರಹದ ಮುಂದೆ ಯಜ್ಞದ ಸಂಭ್ರಮವನ್ನು ಮಾಡಬೇಕೆಂದು ಆಲೋಚಿಸಿದರು. ಆದರೆ ಕ್ರೈಸ್ತರಲ್ಲದ ಉನ್ನತ ಅಧಿಕಾರಿಗಳು ನನ್ನ ಪ್ರಾರ್ಥನೆಯನ್ನು ಅಲ್ಲಿಗೆ ನಿರ್ದೇಶಿಸುವಂತೆ ನಿರ್ದೇಶಿಸಿದರು ಮತ್ತು ನನ್ನ ಕಛೇರಿಯನ್ನು ಮೇಲಿನ ಮಹಡಿಗೆ ಸ್ಥಳಾಂತರಿಸಲು ಆದೇಶಿಸಿದರು ಮತ್ತು ಲೌಕಿಕ ಪ್ರಾರ್ಥನೆಯನ್ನು ನಡೆಸುವ ಅರ್ಚಕನನ್ನು ಅಹ್ವಾನಿಸಲು ನಾವು ನಮ್ಮ ಸಮಯ ಮತ್ತು ಹಣವನ್ನು ಏಕೆ ಖರ್ಚು ಮಾಡಬೇಕೆಂದು ಘೋಷಿಸಿದರು. ಯಾವಾಗ ದೇವರ ಸೇವಕನಾದ ಸ್ಯಾಮ್ ಸೆಲ್ವರಾಜ್ ಯಾವಾಗಲೂ ಕೆಲವು ದೇವರಿಗೆ ಕೆಲವು ರೀತಿಯ ಪ್ರಾರ್ಥನೆಗಳನ್ನು ಮಾಡುತ್ತಾರೆ, ನಮ್ಮೊಂದಿಗೆ ಕೆಲಸ ಮಾಡುತ್ತಿದ್ದಾರೆ ಮತ್ತು ಅವರು ನನ್ನ ಕಛೇರಿಯನ್ನು ಮೊದಲ ಮಹಡಿಯಲ್ಲಿ ಸ್ಥಳಾಂತರಿಸಲು ನಿರ್ದೇಶಿಸಿದರು ಮತ್ತು ನನ್ನನ್ನು ಗೌರವಿಸಿದರು. ಆದುದರಿಂದ ದೇವರು ನನಗೆ ಸರ್ಕಾರಿ ಸೇವಕ ಮತ್ತು ಸಭಾ ಪಾಲಕನಾಗುವ ಸೌಭಾಗ್ಯವನ್ನು ಕೊಟ್ಟನು. ಈ ಹಿಂದೆ ಆತನ ಕರೆಯ ಪ್ರತಿಧ್ವನಿಯ ಸೇವೆಯನ್ನು ಮಾಡಲು ಸರ್ಕಾರ ನನಗೆ ವಿಶೇಷ ಅನುಮತಿ ನೀಡಿದೆ ಎಂದು ನಿಮಗೆ ತಿಳಿದಿದೆ.

ನಂತರ ದೇವರು ಸೌಲನನ್ನು ದೇವರು ತಿರಸ್ಕಾರ ಮಾಡಿದನು, ದಾವಿದನನ್ನು ಇಸ್ರಾಯೇಲ್ಯರ ಅರಸನನ್ನಾಗಿ ಸಮುವೇಲನು ಅಭಿಷೇಕಿಸಿದನು. ದಾವಿದನು ಸಮುವೇಲನನ್ನು ತನ್ನ ಆಧ್ಯಾತ್ಮಿಕ ತಂದೆ ಎಂದು ಪರಿಗಣಿಸಿದ್ದನು. ಯಾವಾಗ ಸಮುವೇಲನು ಮರಣ ಹೊಂದಿದನು ಇಡೀ ಇಸ್ರಾಯೇಲ್ಯ ಜನರು ಅತನಿಗಾಗಿ ಗೋಳಾಡಿದರು.

ಪ್ರಿಯ ಓದುಗನೇ, ನಿಮ್ಮ ಜೀವತದಲ್ಲಿ ಇಂತಹ ಪದನ್ನೋತಿಯನ್ನು ಅನುಭವಿಸಿದ್ದೀರಾ?

ಸಮುವೇಲನ ಬಾಲ್ಯವಾಸ್ಥೆಯ ಸಮಯದಲ್ಲಿ ಮತ್ತು ಯೌವ್ವನ ಮತ್ತು ಪ್ರೌಢವಾಸ್ಥೆಯಲ್ಲಿ ಮತ್ತು ಆತನ ವೃದ್ಧಾಪ್ಯದಲ್ಲಿ ದೇವರು ಆತನನ್ನು ರಕ್ಷಿಸಿದನು ಮತ್ತು ಆತನ ಯಾವುದೇ ಮಾತುಗಳು ನೆಲದ ಮೇಲೆ ಬೀಳಲು ಬಿಡಲಿಲ್ಲ. ಅಂತಹ ಅಭೂತಪೂರ್ವ ಪ್ರೀತಿ ಮತ್ತು ಕಾಳಜಿಯೊಂದಿಗೆ ದೇವರು ನಿಮ್ಮೊಂದಿಗೆ ಇರಲಿ. ನಂಬಿರಿ ಮತ್ತು ಜೀವಿಸುವ ದೇವರಾದ ಯೇಸು ಕ್ರಿಸ್ತನ ಬಳಿಗೆ ಬನ್ನಿರಿ! **ಆಮೆನ್**

❖❖❖


## We Need Library Books

we also need used **library books which are general in nature** such as **Story Books, Fictions, Novels, Fables, Dictionaries, Puzzles, Word Twister and Dramas** for our **St. Paul's Matriculation School**. Please Contact :

**Pr. S. Sam Selva Raj,**
**Echo of His Call,**
Cell : 98412 71858 / 98410 71858
E.mail : sam@echoofhiscall.org

## TAX EXEMPTION

Donations by any individual or organization to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us.

**Account Name** : **ECHO OF HIS CALL EDUCATIONAL TRUST**
**Account Number** : **1023 2923 805**
**Bank Name** : **STATE BANK OF INDIA**
**Branch** : **TRIPLICANE, CHENNAI - 600 005**
**IFSC Code** : **SBIN 0000249** | **SWIFT Code** : **SBI NIN BB 455**

# NEHEMIAH BIBLE COLLEGES Estd.:1992

## ECHO OF HIS CALL MINISTRIES (ESTD.: 1969)

ECHO OF HIS CALL 1969-2019 GOLDEN JUBILEE (ECHO GROUP)

**Recognised by the International Christian Leaders & Senior Pastors for the 50 Years!**

**Applied accreditation for ATA**

**RESIDENTIAL COLLEGE, Velachery**
**(Medium: English & Hindi)**
Course : Certificate Course / Diploma in Theology
Qualification : 10th Standard

**EVENING COLLEGE, Chepauk & Santhoshapuram**
**(Medium : Tamil)**
**Course** : Certificate Course / Diploma in Theology
*Monday, Tuesday & Thursday at 6.30 p.m. to 8.30 p.m.*
(Evening Classes - Chepauk)
Qualification : 10th Standard

**C.Th., - One Year**
**D.Th., - Two Years**

Golden Opportunity!
Don't miss!!
God is Calling you!!!

**Classes Start on : 01-06-2021**

**For more Details & Application Forms Please Contact:**
**Pastor S. Sam Selva Raj, Founder - President**
**Nehemiah Bible College**
10, Mohammed Abdullah 2nd Street, Bells Road, Opp. Cricket Stadium, Chepauk, Chennai - 600 005, India.
**Phone : (+91-44) 2852 8282, 2852 9293, 2854 7766, Cell No : (+91) 98410 71852, 95661 31858**
**E.mail : sam@echoofhiscall.org / biblecor@yahoo.co.in Websites : www.echoofhiscall.org / www.echoofhiscall.com**



# ಹಳ್ಳದಿಂದ ಅರಮನೆಗೆ PIT TO PALACE

**(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)**

**“ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ” (ಮತ್ತಾಯ 24:15)**

**“ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ’’ ಮತ್ತಾಯ 24:15**

ವರ್ಷದ ಆರಂಭಿಕ ದಿನಗಳಲ್ಲಿ, 1972 ನಾನು ಚೆನ್ನೈನ ಸೈದಾಪೇಟೆ ಎಂಬ ಸ್ಥಳದಲ್ಲಿ ಸುವಾರ್ತ ಕೂಟಗಳನ್ನು ನಡೆಸಲು ದೇವರಾತ್ಮನ ದಿಂದ ಉತ್ತೇಜಿಸಲ್ಪಟ್ಟಿದ್ದೇನು. ಗೋಡೆ ಪೋಸ್ಟರ್‌ಗಳು, ಕೈ ಪತ್ರಿಕೆಗಳು, ಇತ್ಯಾದಿಗಳ ಮೂಲಕ ನಾವು ಸಾಕಷ್ಟು ಜಾಹೀರಾತು ನೀಡಿದ್ದೇವು. ಅನೇಕ ಜನರನ್ನು ಈ ಕೂಟಗಳಿಗೆ ಆಹ್ವಾನಿಸಿದ್ದೇವು. ನಾನು ಮತ್ತು ನನ್ನ ಜೊತೆಗಾರರೊಂದಿಗೆ ಅನೇಕ ಜನರನ್ನು ಕರೆತರಲು ಪ್ರಯತ್ನಿಸಿದ್ದೇವು.

ಈ ಕೂಟಗಳಿಗೆ ಅನೇಕ ಪ್ರಾರ್ಥನೆಗಳನ್ನು ನಾವು ಸಲ್ಲಿಸಿದೆವು. ಕೆಲವು ನನ್ನ ಸ್ನೇಹಿತರು ತಮ್ಮ ಸಂಗೀತ ವಾದ್ಯಗಳನ್ನು ತಂದರು ಮತ್ತು ವಿಶೇಷ ಗೀತೆಯ ಹಾಡಿನ ಹಾಳೆಗಳನ್ನು ತಂದರು. ಕೂಟಗಳು ಪ್ರಾರಂಭವಾಗುವ ಸಮಯದಲ್ಲಿ ಅಲ್ಲಿಗೆ ಬರುವ ಯಾವುದೇ ಜನರನ್ನು ನಾವು ನೋಡಲು ಸಾಧ್ಯವಾಗಲಿಲ್ಲ. ಆದರೆ ನಾವು ಬಹಳ ಸಮಯ ಕಾದೆವು, ಕೊನೆಯದಾಗಿ ಇಬ್ಬರು ಆ ಕೂಟಗಳಿಗೆ ಬಂದರು. ಕೂಟಗಳಿಗೆ ಶ್ರಮಿಸಿದ ನನ್ನ ಸಹ ಸಹೋದರರೆಲ್ಲರೂ ತುಂಬಾ ನಿರಾಶೆಯಾದರು. ಯಾಕೆ ದೇವರು ನಮ್ಮ ಪ್ರಾಮಾಣಿಕ ಪ್ರಾರ್ಥನೆಯನ್ನು ಕೇಳಲಿಲ್ಲ ಮತ್ತು ನಮ್ಮ ಕಷ್ಟ ಕೆಲಸವನ್ನು ಸನ್ಮಾನಿಸಲಿಲ್ಲ ಎಂದು ಅವರು ನನಗೆ ಕೇಳಿದರು. ದೇವರು ತನ್ನ ಉತ್ತರವನ್ನು ತನ್ನದೇ ಆದ ರೀತಿಯಲ್ಲಿ ಹೊಂದಿರಬಹುದು ಎಂದು ನಾನು ಅವರಿಗೆ ಹೇಳಿದೆ. **ನಾನು ನಿಜವಾಗಿ ನಿರೀಕ್ಷೆಯನ್ನು ಬಿಡಲಿಲ್ಲ. ಅವನು ತನ್ನ ದೇವರಾದ ಯೆಹೋವನಲ್ಲಿ ತನ್ನನ್ನು ಬಲಪಡಿಸಿಕೊಂಡನು** (1 ಸಮುವೇಲ 30:6).

ಆದರೆ ನಾವು ಆರಾಧನೆಯನ್ನು ನಡೆಸಿದೆವು ಮತ್ತು ನಾನು ಪ್ರಬಲ ಸಂದೇಶವನ್ನು ಭೋದಿಸಿದೆ ಮತ್ತು ಭಾಗವಹಿಸಿದ ಇಬ್ಬರಲ್ಲಿ ಒಬ್ಬನು ದೇವರಿಗೆ ತನ್ನ ಜೀವಿತವನ್ನು ಸಮರ್ಪಿಸಿದನು ಮತ್ತು ನಂತರ ಅವನು ನನ್ನೊಂದಿಗೆ ಕರ್ತನಾಗಿ ಸೇವೆಯನ್ನು ಮಾಡಲು ತಾನು ಒಪ್ಪಿಸಿಕೊಂಡನು.

ಈಗ ದೇವರು ನನ್ನನ್ನು ದೊಡ್ಡ ಕೂಟಗಳಲ್ಲಿ ಬೋಧಿಸಲು ಬೆಳೆಸಿದ್ದಾನೆ, ಅಲ್ಲಿ ಸಾವಿರಾರು ಜನರು ಭಾರತದಲ್ಲಿ ಮತ್ತು ಭಾರತದ ದೇಶದ ಹೊರಗೆ ಸೇರುತ್ತಾರೆ. ದೇವರ ನಾಮಕ್ಕೆ ಮಹಿಮೆಯುಂಟಾಗಲಿ. ಇದಕ್ಕಾಗಿ ನಾನು ತಾಳ್ಮೆಯಿಂದ ಮತ್ತು ನಂಬಿಕೆಯಿಂದ ಅನೇಕ ವರ್ಷಗಳಿಂದ ಕಾಯಬೇಕಾಯಿತು.

ಪ್ರೀತಿಯ ಸಹೋದರ ಮತ್ತು ಸಹೋದರಿಯರೇ, ನೀವು ವೈಫಲ್ಯದ ದೋಣಿಯಲ್ಲಿ ಪ್ರಯಾಣಿಸುತ್ತಿದ್ದೀರಾ? ನಿಮ್ಮ ಎಲ್ಲಾ ಕಠಿಣ ಪರಿಶ್ರಮಗಳು ಮತ್ತು ಉಪವಾಸದ ಪ್ರಾರ್ಥನೆಗಳು ಫಲ ನೀಡುವುದಿಲ್ಲ ಎಂದು ನೀವು ಭಾವಿಸುತ್ತೀರಾ? ಕೆಲವು ಬಾರಿ ನಾವು ಆತನ ಕಡೆಗೆ ನಂಬಿಕೆ ಮತ್ತು ತಾಳ್ಮೆಯನ್ನು ಪರೀಕ್ಷಿಸಲು ಬಹಳ ಮತ್ತು ತ್ವರಿತ ನಿರೀಕ್ಷೆಯೊಂದಿಗೆ ಸಕ್ರಿಯವಾಗಿರುವಾಗ ದೇವರು ಮೌನವಾಗಿರುತ್ತಾನೆ.

***ಬಂಗಾರವು ನಾಶವಾಗುವಂಥದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟ ಹಾಕಿ ಶೋಧಿಸುವುದುಂಟಷ್ಟೇ. ಬಂಗಾರಕ್ಕಿಂತ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ಕೀರ್ತಿ ಪ್ರಭಾವ ಮಾನಗಳನ್ನು ಉಂಟು ಮಾಡುವನು*** (1 ಪೇತ್ರ 1:7).

ದೇವರು ನಿಮ್ಮನ್ನು ಆಶೀರ್ವದಿಸಲಿ.

## ಕರೆಯ ಪ್ರತಿಧ್ವನಿ

(16 ಭಾಷೆಗಳಲ್ಲಿ ಪ್ರಕಟವಾಗುವುದು)

**ವಾರ್ಷಿಕ ಸದಸ್ಯತ್ವ ರೂ. 100/-** **ಆಜೀವ ಸದಸ್ಯತ್ವ ರೂ. 2000/-**

**ಕರೆಯ ಪ್ರತಿಧ್ವನಿ ಮಾಸಪತ್ರಿಕೆಯು** ಪ್ರತಿ ತಿಂಗಳು ಬೇಕೆನ್ನುವವರು ದಯವಿಟ್ಟು ನಮಗೆ ಬರೆಯಿರಿ. ದೇವಜನರಾದ ನಿಮ್ಮಂತವರು ಉದಾರ ವಾಗಿ ಕಳುಹಿಸಿಕೊಡುವ **ದಾನಗಳಿಂದಲೇ ಈ ಸೇವೆ ಮುಂದುವರಿಯುತ್ತದೆ.**

**ಕರೆಯ ಪ್ರತಿಧ್ವನಿ ಪತ್ರಿಕೆಯು 16** ಭಾಷೆಗಳಲ್ಲಿ ನಮ್ಮ ವೆಬ್‌ನಲ್ಲಿ ಉಪಬಲ್ಧ.

**ದಯಮಾಡಿ ನಿಮ್ಮ ದೂರವಾಣಿ / ಮೊಬೈಲ್ ಸಂಖ್ಯೆ ಇಲ್ಲವೆ ಇ-ಮೈಲ್ ವಿಳಾಸವನ್ನು ಕಳುಹಿಸಿ ಕೊಡಿ.**

ನಿಮ್ಮ **ಪತ್ರಗಳು, ಹಣ ಸಹಾಯ (ಡಿ. ಡಿ., / ಚೆಕ್, / ಎಂ.ಓ.) ಮುಂತಾದವುಗಳನ್ನು** Echo of His Call Ministries **ಶಿರೋನಾಮೆ ಗಳಲ್ಲಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು. ನಮ್ಮ ಬ್ಯಾಂಕಿನ ಖಾತೆಯ ವಿವರಗಳು ಈ ಕೆಳ ಕಂಡಂತಿವೆ. ನೀವು ಕಳುಹಿಸುವ ದಾನಗಳ ವಿವರಗಳನ್ನು ದಯವಿಟ್ಟು ನಮಗೆ ತಿಳಿಸಿರಿ. ಬ್ಯಾಂಕ್, ಉಪಶಾಖೆ, ಹೆಸರು, ಖಾತೆಯ ಸಂಖ್ಯೆ:**

### ECHO OF HIS CALL

10, Mohammed Abdullah II Street, Chepauk,Chennai - 600 005. India

**Ph: (+91-44) 2852 8282, 2852 9293, 2854 7766,**

**Cell: (+91) 98410 71852, 90924 62566**

**E-mail: sam@ehoofhiscall.org / biblecor@yahoo.co.in.**

**Website: www.echofhiscall.org. / www.echoofhiscall.com**

RNI NO. 70107/98, Postal Regn. No. TN/CH (C)/195/21-23 WPP NO. TN/PMG(CCR)/WPP-219/21-23

ದಯಮಾಡಿ ನಿಮ್ಮ ಮಿತ್ರರ ಮತ್ತು ಸಂಬಂಧಿಕರ ಹತ್ತು ಹೆಸರುಗಳನ್ನು ವಿಳಾಸ, ಇ-ಮೇಲ್ ವಿಳಾಸ ಮತ್ತು ಮೊಬೈಲ್ ನಂಬರಿಗೊಂದಿಗೆ ಈ ಕೆಳಗೆ ನಮೂದಿಸಿರಿ. ನಾವು ಉಚಿತ ಕೊಡುಗೆಯ ರೂಪದಲ್ಲಿ ಅವರಿಗೆ 'ಕರೆಯ ಪ್ರತಿಧ್ವನಿ' ಪ್ರತಿ ತಿಂಗಳ ಸಂಚಿಕೆಯನ್ನು ಕಳುಹಿಸಿ ಕೊಡುತ್ತೇವೆ.

1. ________________________________________

2. ________________________________________

3. ________________________________________

4. ________________________________________

5. ________________________________________

6. ________________________________________

7. ________________________________________

8. ________________________________________

9. ________________________________________

10. ________________________________________

Please use additional sheets if you have more addresses. God will reward you

**RNI NO. 70107/98**
**Postal Regn. No. TN/CH/(C)/195/21-23**
**WPP NO. TN/PMG(CCR)/WPP- 219/21-23**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th MAY 2021**
**If un-delivered please return to:**

**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from 18, Mohammed Abdullah Sahib Street, Chepauk, Chennai-600 005 and printed by him at **Echo of His Call Printers** 18, Mohammed Abdullah Sahib Street, Chepauk, Chennai-600 005. Editor: **S. Sam Selva Raj.**